ಕವಿ:
ಕೆ. ಎನ್. ಭಟ್, ಶಿರಾಡಿಪಾಲ್

1959

ವಿಚಾರ ಸಾಹಿತ್ಯಮಾಲೆ,
ಮುಂಡಾಜೆ.

ಪ್ರಥಮ ಮುದ್ರಣ

ಮುಖ ಚಿತ್ರಕಾರರು:
ಬ್ರದರ್, ಜೆರಾಲ್ಡ್, ಒ. ಸಿ.
ಮಂಗಳೂರು.

*

ಬೆಲೆ: 0–9–0 ನ. ಪೈ. 56

ಮುದ್ರಕರು:
ವಿಜಯ ಮುದ್ರಣಾಲಯ
ಮಂಗಳೂರು.

ಶ್ರೀಮಾನ್, ಅಮ್ಮೆಂಬಳ ಶಂಕರನಾರಾಯಣ ನಾವಡ, ವಿದ್ವಾನ್, ಅವ
ಪ್ರೀತ್ಯರ್ಪಣೆ - ಕೆ. ಎನ್. ಭ. ಶಿರಾಡಿಪಾ
೨೦. ೧೦. ೫೯

ಕನ್ನಡ ಸಾಹಿತ್ಯ ಸಮೃದ್ಧವಾಗಲಿ!

ವಿಚಾರ ಸಾಹಿತ್ಯಮಾಲೆಯು ಅರಳಿದ ಆರನೆಯ ಪುಷ್ಪ

ಸೌಂದರ್ಯ ಸೌಗಂಧ

ರಸಕವನ ಸಂಕಲನ

*

ಕವಿ:

ಕೆ. ಎನ್. ಭಟ್, ಶಿರಾಡಿಪಾಲ್.

1959

ವಿಚಾರ ಸಾಹಿತ್ಯಮಾಲೆ

ಅಂಚೆ—ಮುಂಡಾಜೆ, ದ. ಕ.

ಎರಡು ಮಾತು

'ಸತ್ಯಂ, ಶಿವಂ, ಸುಂದರಂ, ಎಂಬೀ ಮೂರು ತತ್ವಗಳ ಮಿಲನದಿಂ ಶೋಭಿಸುವ ಕಾವ್ಯವು, ಜನಜೀವನದ ಕತ್ತಲೆಯನ್ನು ತೊಡೆದು ಬೆಳಕನ ನೀಡಿ, ಜನಾಂಗದಲ್ಲಿ ನವೋತ್ಸಾಹವನ್ನು ತುಂಬಿ, ಲೋಕಕಲ್ಯಾಣವನ ಸಾಧಿಸುವುದು. ಇಂತಹ ಕಾವ್ಯವು ಜೀವನದ ಅಸಮತೆಯನ್ನು ಸಮತೆಗೆ ಅಸುಂದರತೆಯನ್ನು ಸುಂದರತೆಗೆ, ಪರಿವರ್ತಿಸುವಲ್ಲಿ ಸಹಕಾರಿಯಾಗಿ ಅತೃಪ್ತ ಆತ್ಮಕ್ಕೆ ಅಪಾರತೃಪ್ತಿಯನ್ನು ಕೊಡುತ್ತ ಆನಂದದಾಯಕವಾಗಿ ಆದರ್ಶವನ್ನು ರೂಪಿಸುವುದು. ಈ ಬಗೆಯ ಕಾವ್ಯವೇ ಕವಿಯ ಪ್ರಯತ್ನ ಫಲ! ಅಂತಹ ಕಾವ್ಯವೇ ಸಾಹಿತ್ಯ!ವೆಂದು ಪ್ರಾಜ್ಞರು ಅಭಿಪ್ರಾಯ ಪಡುವರು.

ಸತ್ಯವನ್ನು ಮಂಗಲಕರವಾದ ಶಿವತತ್ವದಿಂದ ಅಲಂಕರಿಸಿ, ಕಾವ್ಯ ಕಲಾ ಸೌಂದರ್ಯದಿಂದ ಸುಂದರತೆಯನ್ನಿತ್ತು ಶೃಂಗರಿಸಿ, "ಸೌಂದರ್ಯ-ಸೌಗಂಧ"ವೆಂಬೀ ನಾಮಕರಣ ಮಾಡಿ ಸಾಹಿತ್ಯಪ್ರೇಮಿಗಳಾದ ವಾಚಕ ಮುಂದೆ ಈ ಕೃತಿಯನ್ನಿರಿಸಲು ಆನಂದವಾಗುವುದು.

ಅನಂತವಾದ ಕಾವ್ಯ ಧಾರಾಪ್ರವಾಹದಲ್ಲಿ ಈ ಕೃತಿಯೊಂದು ಬಿಂದು ಮಾತ್ರವಾಗಿರುವುದು. ಇನ್ನು ಈ ಪ್ರಯತ್ನ ಎಷ್ಟರ ಮಟ್ಟಿಗೆ ಸಫಲ ವಾಗಿದೆಯೆಂದು ನಿರ್ಧರಿಸುವ ವಿಚಾರ ಪ್ರಾಜ್ಞರಾದ ವಾಚಕರಿಗೆ ಸೇರಿದೆ

ಕಾಗದದ ಬೆಲೆ ವಿಶೇಷವಾಗಿ ಏರಿರುವ ಈ ಕಾಲದಲ್ಲಿ ದಾನರೂಪ ವಾಗಿ ಧನಸಹಾಯವನ್ನಿತ್ತು ಈ ಕೃತಿಯನ್ನು ಪ್ರಕಾಶಿಸಲು ನೆರವಾದ ಶ್ರೀಮಾನ್, ಗೋಪಾಲ ನಾರಾಯಣ ಭಿಡೆ, ಮುಂಡಾಜೆ, ಶ್ರೀ ರಾಘವ ಹೆಬ್ಬಾರ್, ನೆರಿಯ ಶ್ರೀಯುತರೀರ್ವರಿಗೂ ಹೃತ್ಪೂರ್ವಕ ವಂದನೆಗಳ ನ್ನರ್ಪಿಸುತ್ತೇನೆ. ಈ ಕಾವ್ಯ ಕನ್ನಿಕೆಯ ಹಣೆಗೆ ಮುನ್ನುಡಿಯ ರೂಪ ದಿಂದ ಕುಂಕುಮವನ್ನಿಟ್ಟ ವಿದ್ವಾಂಸರಿಗೂ, ಹಸ್ತಪ್ರತಿಯ ತಯಾರಿಸಿ ಕೊಟ್ಟ ಮಿತ್ರರಿಗೂ, ಹಲವು ರೀತಿಯಿಂದ ನೆರವನ್ನಿತ್ತ ಗೆಳೆಯರ ಬಳಗಕ್ಕೂ ಮುದ್ರಿಸಿಕೊಟ್ಟ ಪ್ರೆಸ್ಸಿನವರಿಗೂ, ಸಪ್ರೇಮ ವಂದನೆಗಳು.

ದಿನಾಂಕ, 5 — 3 — 1959,
ವಿಲಂಬೀ ಸಂ, ಏಕಾದಶೀ.

ಕೆ. ನೀ. ಭ.
ಶಿರಾಡಿಪಾಲ್

ಮುನ್ನುಡಿ

ಮಲೆನಾಡ ಮಡಿಲ ಮುಂಡಾಜೆಯ ಗೆಳೆಯರಾದ ಕವಿ ಶ್ರೀ। ಕೆ. ನೀಲಕಂಠಭಟ್, ಶಿರಾಡಿಪಾಲರು ಈ ಮೊದಲೇ ಕಾವ್ಯತರಂಗ ವಸಂತ ವಿಹಾರಗಳನ್ನು ಓದುಗರಿಗಿತ್ತು ಚಿರಪರಿಚಿತರಾಗಿರುವರು ಆ ಕೃತಿಗಳಿಗೆ ದೊರೆತ ಹಿರಿಯ ಕಿರಿಯ ಗೆಳೆಯರ ಪ್ರೋತ್ಸಾಹದ ಫಲವಾಗಿ ಅವರ 'ಸೌಂದರ್ಯ—ಸೌಗಂಧ'ವೆಂಬ ಮೂರನೆಯ ಕವನಸಂಕಲನವಿಂದು ಬೆಳಕು ಕಾಣುತ್ತಿರುವುದು ಸಾಹಿತ್ಯಪ್ರಿಯರಿಗೆ ಸಂತಸದ ಸಂಗತಿಯಾಗಿದೆ.

'ಪ್ರತಿಭಾನಂ ಕಾವ್ಯವಿದ್ಯಾನಿಚಯಪರಿಚಯಂ ವೃದ್ಧಸೇವಾನುರಾಗಂ, ಸತತಾಭ್ಯಾಸಪ್ರಯತ್ನಂ ಕವಿತೆಗೆ ನಿಯತಂ ಕಾರಣಂ' ಎಂದು ಲಾಕ್ಷಣಿಕರು ಹೇಳಿರುವ ದೈವದತ್ತವಾದ ಪ್ರತಿಭೆಯನ್ನು ಶ್ರೀಯುತರು ಕಾವ್ಯಪರಿಚಯ ಸತತಾಭ್ಯಾಸ ಪ್ರಯತ್ನಗಳಿಂದ ಬಳೆಸಿಕೊಂಡಿರುವುದನ್ನು ಇವರ ಈ ಕೃತಿಯಲ್ಲಿ ಕಾಣಬಹುದಾಗಿದೆ. ಹಳೆಯ ಹಾಗೂ ಹೊಸ ಛಂದಸ್ಸಿಗನುಗುಣವಾದ ಪ್ರಾಸಬದ್ಧ ಹಾಗೂ ಮುಕ್ತಪ್ರಾಸಕವಿತೆಗಳು ಇದರಲ್ಲಿವೆ. ಪ್ರಾಸಕ್ಕೆ ಕಟ್ಟುಬಿದ್ದು ಬಲಾತ್ಕಾರದಿಂದ ಬರೆದ ಕವಿತೆಯಲ್ಲಿ ಲಾಲಿತ್ಯವಿರದು. ತಾನಾಗಿ ಹರಿದು ಬಂದ ಕವಿತೆಯು ಕಮನೀಯವಾಗುವುದು. ಅಂತಹ ಕವಿತೆಗಳು ಈ ಕೃತಿಕುಸುಮದ ಸೌಂದರ್ಯ—ಸೌಗಂಧಗಳನ್ನು ಹೆಚ್ಚಿಸಿವೆ.

ಶ್ರೀ। ಕೆ. ನೀಲಕಂಠಭಟ್ಟರ ಈ ಕೃತಿಯು ಮೊದಲ ಕೃತಿಗಳಿಗಿಂತ ಸ್ವಾರಸ್ಯಪೂರ್ಣವಾಗಿದ್ದು ವಿವಿಧ ವಿಷಯಗಳ ಮೇಲೆ ಬರೆದ ಇಪ್ಪತ್ತು ಕವಿತೆಗಳಿದ್ದು ಉಜ್ಜ್ವಲ ಭವಿಷ್ಯವನ್ನು ಸೂಚಿಸುತ್ತಿದೆ. ಇವರಿಂದ ಇನ್ನೂ ಉತ್ತಮವಾದ ರಸವತ್ತಾದ ಕೃತಿಗಳು ಕನ್ನಡ ಸಾಹಿತ್ಯದ ಕಣಜವನ್ನು ತುಂಬುವಂತಾಗಲೆಂದು ಹಾರೈಸಿ ಈ ಕೃತಿಕಾಮಿನಿಯ ಮುಖಕ್ಕೆ ಈ ಮುನ್ನುಡಿಯ ಮಂಗಲತಿಲಕವನ್ನಿಡುವೆನು.

ನಿಲಾಗ್ರಿಸ್ ಹೈಸ್ಕೂಲು
ಮಂಗಳೂರು
ಮಹಾಶಿವರಾತ್ರಿ
ತಾ. ೭—೩—೫೭.

ಇತಿ,
ಎಸ್. ತಿರುಮಲೇಶ್ವರ ಭಟ್
ಕನ್ನಡ ಪ್ರಾಧ್ಯಾಪಕ

ಪರಿವಿಡಿ

ಪೂಜ್ಯ ವಿವೇಕಾನಂದ

॥ ಕಂದಂಗಳ್ ॥

ಭಾರತ ವರ ಸಂಸ್ಕೃತಿಯಂ ।
ಸಾರುತ ಧೀರಂ ವಿದೇಶದೊಳ್ ಬಳಿಕಂ ತಾ-।
ನೇರುತ ಕೀರುತಿದೇರಂ ।
ಭಾರತಕಂ ಮರಳ್ದ ಕೂಡಿ ವಿಜಯ ಶ್ರೀಯಂ ॥ ೧ ॥

ಭಾರತವತಿಸಂಭ್ರಮದಿಂ ।
ದಾರತಿ ಬೆಳಗುತ್ತ ಹೇ ಬುಧಾಗ್ರಣಿ ಧರ್ಮಾ-।
ಧಾರಕ ವಿದ್ಯಾಸಾಗರ ।
ಧಾರಾ ಸ್ವಾಗತ ನಿನಗೆನುತಭಿವಂದಿಸಿತೈ ॥ ೨ ॥

ಧರ್ಮಾಂಗಂಗಳ ಬೋಧಿಸಿ ।
ನಿರ್ಮಲವಹ ಕಾರ್ಯಗಳನೆ ಗೆಯ್ಯುತ ನಿಚ್ಚಂ ।
ಧರ್ಮದ ಸಾರವನುಣಿಸಿದ ।
ಧರ್ಮಸುಬೋಧಕನಹಂ ವಿವೇಕಾನಂದಂ ॥ ೩ ॥

ನಶ್ವರವಿದು ಜೀವನವಿಾ ।
ದುಷ್ಕರ ಭವಬಂಧದಿ ಸಿಲುಕದೆ ಸಾಹಸದಿಂ ।
ವಿಶ್ವದಿ ವಂದ್ಯನದಾಗುತೆ ।
ಶಾಶ್ವತ ಕೀರ್ತಿಯನು ಪಡೆದೆ ಸತ್ಕರ್ಮಗಳಿಂ ॥ ೪ ॥

ಪಡೆದಲ್ಪಾಯುಷ್ಯಮದಾ ।
ದೊಡಮೇಂ ಬಾಲಾರ್ಕನಂತೆ ಬೆಳಗುವ ನಿನ್ನಂ ॥
ಪಡೆದೀ ಭಾರತ ಧನ್ಯಂ
ಬಿಡದುದಿಸಲಿ ಭಾರತದಲಿ ನಿನ್ನಂ ಪೋಲ್ವರ್ ॥ ೫ ॥

ಸ್ವಾತಂತ್ರ್ಯ ಸಂಭ್ರಮ

ವರುಷ ವರುಷವು ಬರುವ ಸ್ವಾತಂತ್ರ್ಯ ಶುಭದಿನವ ।
ಹರುಷದಿಂದಾಚರಿಸಿ ನಲಿದುಲಿಯುತಿಹೆವು
ಹುಟ್ಟು ಹಬ್ಬದ ತೆರದಿ ಸಂತಸದಿ ಮೈಮರೆತು ।
ಪಟ್ಟ ಕಷ್ಟವನೆಲ್ಲ ಮರೆಯುತ್ತಲಿಹೆವು ॥ ೧ ॥

ಸ್ವಾತಂತ್ರ್ಯದಡಿಗಲ್ಲ ನಿಟ್ಟವರ ಸ್ಮರಿಸುವೆವು ।
ಸ್ಮರಿಸುವೆವು ನಾಯಕರ ಸಹಚರರ ಸಹಿತ
ಸ್ವಾತಂತ್ರ್ಯ ದೊರಕಿಸಲು ಹೋರಾಡಿ ಮಡಿದಿರುವ ।
ವೀರಯೋಧರ ಸ್ಮರಣೆಗೈವೆವನವರತ ॥ ೨ ॥

ಹರ್ಷದಿಂ ರಥವೇರಿ ನವಕಾಂತಿಯನು ಬೀರಿ ।
ಸ್ವಾತಂತ್ರ್ಯ ಸೂರ್ಯನವ ಬೆಳಗುತಿಹನಿಂದು ॥
ಸಂಭ್ರಮದ ಶುಭದಿನದೊಳೈಕ್ಯವನು ಸಾಧಿಸುತ ।
ಸ್ವಾತಂತ್ರ್ಯದಿತಿಹಾಸ ಮೆರೆಸುವೆವು ಮುಂದು ॥ ೩ ॥

ಸತ್ಯಧರ್ಮದಿ ನಡೆದು ಶಾಂತಿಯನು ಪಾಲಿಸುವ ।
ನಿತ್ಯನೇಮವ ಪಿಡಿದು ಮುನ್ನಡೆಸುತಿರುವ ॥
ಹಿಂಸೆಯನು ತ್ಯಜಿಸುತ್ತ ವಂಚನೆಯ ವರ್ಜಿಸುತ ।
ಲಂಚದಾಸೆಯ ತೊರೆದು ಮುಂದಡಿಯನಿಡುವ ॥ ೪ ॥

ಸ್ವಾತಂತ್ರ್ಯ ಸಫಲತೆಯ ಗುರಿಯತ್ತ ಸಾಗುತಲಿ ।
ಮಾಡುತಿಹ ತಪ್ಪುಗಳನೊಪ್ಪಿಕೊಳ್ಳುತಲಿ ॥
ತಿದ್ದಿಕೊಳ್ಳುತ ನಡೆವ ಸದ್ಬುದ್ಧಿಯುದಯಿಸಲಿ
ಸ್ವಾತಂತ್ರ್ಯ ನಿಜಸುಖವದೆಲ್ಲರಿಗು ಸಿಗಲಿ ॥ ೫ ॥

ಆಗೋಸ್ತು 15. ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭ ಹಾಡಿದ ಕವಿತೆ.

ಕರ್ಣಾಟಕ ಏಕೀಕರಣ........?

ಜಾತಿಯು ಪಂಥಗಳೆಷ್ಟೇಯಿರಲಿ ।
ನೀತಿಯುದೆಲ್ಲರಿಗೊಂದೇಯಿಹುದು ॥
ಭಾಷಾ ಪ್ರಾಂತಗಳೆಷ್ಟೇ ಬೆಳಗಲಿ ।
ದೇಶವಿದೊಂದೇ ಭಾರತವಿಹುದು ॥ ೧ ॥

ಕನ್ನಡ ನಾಡಿನ ಕನ್ನಡ ಜನತೆಯು ।
ಕಣ್ಣುಗಳಂತಿದೆ ಕನ್ನಡ ನುಡಿಯು ॥
ಕನ್ನಡ ಪ್ರಾಂತವ ರೂಪಿಸಬೇಕು ।
ಕನ್ನಡದುನ್ನತಿಯಾಗಲು ಬೇಕು ॥ ೨ ॥

ಹಲವರು ಏಕೀಕರಣಕೆ ದುಡಿವರು ।
ಕೆಲವರು ಬೇಡವಿದೆಂಬಂತಿರುವರು ॥
ಗುರಿಯೊಂದಿಲ್ಲದೆ ಗಾವುದ ನಡೆದರು ।
ಬರಿಯ ಪರಿಶ್ರಮ ಫಲವೇನಿಹುದು? ॥ ೩ ॥

ಜನತೆಯೊಳೈಕ್ಯವದಿಲ್ಲದ ಕಾರ್ಯವು ।
ಕನಸಿನ ಗಂಟಿನ ಪರಿಯುಲಿತೋರ್ಪುದು ॥
ಐಕ್ಯವೊಳೆಲ್ಲರು ಶ್ರಮಿಸಲು ಬೇಕು ।
ಕನ್ನಡ ಪ್ರಾಂತವ ಕಟ್ಟಲು ಬೇಕು ॥ ೪ ॥

ಬೋಧಿಸಬೇಕಿದ ಕನ್ನಡ ಜನತೆಗೆ ।
ಶೋಧಿಸಬೇಕೀ ಜನತೆಯ ಮನವನು ॥
ಅರಿತರೆ ಏಕೀಕರಣದ ಧ್ಯೇಯುವ ।
ತ್ವರಿತದಿ ಸಫಲತೆ ಹೊಂದಲು ಬಹುದು ॥ ೫ ॥

ಕಲ್ಲುಗಳಿರಲಿ ಮುಳ್ಳುಗಳಿರಲಿ ।
ಪರ್ವತವೇ ತಾ ಮುಂದಿರುತಿರಲಿ ॥

ಒಂದೇ ದಾರಿಯು ಮುಂದಿಹುದಿಂದು ।
ಧೈರ್ಯದಿ ಮುಂದಡಿಯಿಡಬೇಕಿಂದು ॥ ೬ ॥

ಒಮ್ಮತದಿಂದಲಿ ಸಾಧಿಸಲಾಗ ।
ದೇಶ ಸ್ವತಂತ್ರವದಾಯಿತು ಬೇಗ ॥
ಒಂದೇ ಧ್ಯೇಯದಿ ಮುಂಬರಲೀಗ ।
ಕನ್ನಡ ಪ್ರಾಂತವು ಶೋಭಿಪುದಾಗ ॥ ೭ ॥

ಒಮ್ಮನದಿಂದಲಿ ಒಕ್ಕೊರಲಿಂದಲಿ ।
ನಮ್ಮಾ ಕೇಳಿಕೆ ಘೋಷಿಸಲೀಗ ।
ಕರ್ನಾಟಕದಾ ಏಕೀಕರಣದ ।
ಸ್ವರ್ಣ ಮುಹೂರ್ತವು ಬರಲಿದೆ ಬೇಗ ॥ ೮ ॥

ಕರ್ನಾಟಕ ಪ್ರಾಂತ್ಯರಚನೆಯ ಚಳವಳದ ಸಂದರ್ಭ ಆಗೋಸ್ತು 1955ರಲ್ಲಿ ರಚಿತವಾದುದು.

ಲೋಕ ಮಾನ್ಯರ ಅಮರ ಸಂದೇಶ

ಎಲೆಕವಿಯೆ ವರಕವಿಯೆ ಹಿರಿಯಕವಿ ಸಾಹಿತಿಯೆ ।
ಮಲಗಿರ್ಪೆಯೇಕೆ ಮೋರೆಯ ಮುಸುಕಸರಿಸು
ಬೆಳಗಾಯ್ತು ಮೇಲೇಳು ಚಳಿಯೆಂದು ಮಲಗದಿರು ।
ತಿಳಿರಸಸುಕಾವ್ಯದಿಂ ಜನರ ನೆಚ್ಚರಿಸು ॥ ೧ ॥

ಹೊಗಳಿ ತೆಗಳಲಿ ನಿನ್ನ ಹುಚ್ಚನೆನ್ನುತಲಿರಲಿ ।
ಹಿಗ್ಗದೆಲೆ ಕುಗ್ಗದೆಲೆ ನಡೆಯುತಿರು ಮುಂದೆ ॥
ಸಚ್ಛೀಲರೂಪಿಸುತ ಸದ್ಧರ್ಮ ಬೋಧಿಸುತ ।
ಸತ್ಯದಾ ಪ್ರತಿಬಿಂಬವನು ತೋರಿಸಿಂದೆ ॥ ೨ ॥

ಶಾಂತಿಸಹನೆಯ ಪಥದಿ ಧೈರ್ಯಶೌರ್ಯದಿ ಸಾಗು ।
ದುಷ್ಕೃತ್ಯ ದುರ್ನಡತೆಗಳ ದಮನಕಾಗಿ ॥
ಆತ್ಮದುನ್ನತಿಗಾಗಿ ಸರ್ವರೇಳಿಗೆಗಾಗಿ ।
ದೇಶದಾ ಹಿತಕಾಗಿ ದುಡಿ ಸ್ವಾರ್ಥ ನೀಗಿ ॥ ೩ ॥

ಆತ್ಮದೊಳಗಡಗಿಹನು ಪರಮಾತ್ಮನವನಿಹನು ।
ಆತ್ಮಶುದ್ಧಿಯೆ ಮೂಲವದು ಮುಖ್ಯ ಪೂಜೆ ॥
ಕರ್ಮಯೋಗವ ಪಿಡಿದು ಸತ್ಕರ್ಮವೆಸಗುತ್ತ ।
ಧರ್ಮ ಮರ್ಮವನರಿಯೆ ಕಂಗೊಳಿಪುದೋಜೆ ॥ ೪ ॥

ವೈದ್ಯ ನೀನಾಗಿರುತೆ ವ್ಯಾಧಿಯಿಂದೇಕಳುವೆ ।
ವೇದಾಂತಿಯಾಗಿರುತೆ ದುರ್ನಡತೆಯೇಕೆ ?
ಮನುಜನಾಗಿಹ ನಿನಗೆ ಮಾನವತೆಯೇಕಿಲ್ಲ ।
ಇನಿತು ಸನ್ಮತಿ ನಿನಗೆ ಬಾರದಿಹುದೇಕೆ ? ॥ ೫ ॥

ಪರರನ್ನು ವಂಚಿಸುತ ಗಳಿಸಿದಾ ಧನಕನಕ ।
ಸ್ಥಿರವಲ್ಲ ಹಿತವಲ್ಲವದ ನರಿಯಬೇಕು ।
ಸ್ವಾರ್ಥ ಗರ್ವವ ತೊರೆದು ಜನಸೇವೆಗೈಯುತ್ತ ।
ಜನುಮ ಸಾರ್ಥಕಗೊಳಿಸೆ ಮುಂದರಿಯಬೇಕು ॥ ೬ ॥

ವಿದ್ಯೆಯನು ಗಳಿಸುತ್ತ ಜ್ಞಾನವನು ವರ್ಧಿಸುತ ।
ಜನಹಿತವ ಸಾಧಿಸಲ್ ದೃಢಚಿತ್ತನಾಗು ॥
ವಿದ್ಯೆಯೇ ಸಂಪತ್ತು ವಿನಯವೇ ಭೂಷಣವು ।
ಸುಗುಣ ಸುಂದರನೆನಿಸಿ ಆದರ್ಶನಾಗು ॥ ೭ ॥

ವರ್ಣಭೇದಗಳಿರಲಿ ನಿಯಮ ಭೇದಗಳಿರಲಿ ।
ರಾಷ್ಟ್ರೀಯ ಪ್ರೇಮವದು ನೆಲೆಯಾಗಿ ನಿಲಲಿ ॥
ನಾವು ನಮ್ಮವರೆಂಬ ನಮ್ಮ ದೇಶವಿದೆಂಬ ।
ಒಮ್ಮತದ ಭಾವನೆಯು ಅಂಕುರಿಸುತಿರಲಿ ॥ ೮ ॥

ಧರ್ಮರಕ್ಷಣೆಗಾಗಿ ದೇಶರಕ್ಷಣೆಗಾಗಿ ।
ಸರ್ವಶಕ್ತಿಯು ಸತತ ಸಂಘಟಿಸುತಿರಲಿ ॥
ಆತ್ಮ ಶಕ್ತಿಯು ಬಲದಿ ನರನರವು ನಿಮಿರಿರಲಿ ।
ಆತ್ಮ ತ್ಯಾಗದ ಶಕ್ತಿ ತುಂಬುತ್ತಲಿರಲಿ ॥ ೯ ॥

ಲೋಕವೇ ನಿನ್ನದಿದು ಲೋಕದವ ನೀನಿರುವೆ ।
ಲೋಕ ಸೇವೆಯ ಮಾಡು ನಿನ್ನವರುಯಿನರು ॥
ಲೋಕ ಸೇವಕನಾಗಿ ಲೋಕಮಾನ್ಯನು ಎನಿಸಿ ।
ನಾಕ ಸುಖಮಂ ಪಡೆದು ಧನ್ಯನೆಂದೆನಿಸು ॥ ೧೦ ॥

ಅಮರ ಕೀರ್ತಿಯ ಪಡೆದ ಲೋಕಮಾನ್ಯರ ಸ್ಮೃತಿಯು ।
ಅಮರ ಸಂದೇಶವದು ಚೇತನವ ಕೊಡಲಿ ।
ಮಮತೆಯಿಂ ನಾಡಿಗರು ಸೌಹಾರ್ದದಿಂ ಕಲೆತು ।
ಘನಸುಗುಣ ಗಾಂಭೀರ್ಯದಿಂ ಬೆಳಗುತಿರಲಿ ॥ ೧೧ ॥

(ಲೋಕಮಾನ್ಯರ ಶತಮಾನೋತ್ಸವದ ಪುಣ್ಯ ಸ್ಮರಣೆಯ ದಿನದಂದು,
(ಜುಲೈ. 23—1956ರಂದು ಹಾಡಿದುದು)

ನಿಸರ್ಗ ಶೋಭೆ

(ಭಾಮಿನಿ ಷಟ್ಪದಿ)

ಶಿಲೆಯ ನಿರ್ಮಿತ ಗಗನ ಚುಂಬಿತ ।
ಕಲೆಯ ಶಿಲ್ಪ ಕಲಾಕೃತಿಯ ವೋಲ್ ।
ಚೆಲುವಿನಿಂ ಶೋಭಿಸುವ ಪರ್ವತ ಮುಕುಟದಂತಿಹುದು ॥
ಮಲೆಯ ನಂದನವನವ ರಕ್ಷಿಪ ।
ಚೆಲುವ ಈ ಪ್ರಾಕಾರ ಭವ್ಯವು ।
ಚೆಲುವ ಸಂತಾನಂದ ನಿರತವು ಲಭ್ಯವಿಹುದಿಲ್ಲಿ ॥ ೧ ॥

ವರಮನೋಹರ ವೃಕ್ಷಲತೆಗಳು ।
ತರತರದ ಮೃಗಪಕ್ಷಿ ಗಡಣವ ।
ಪೊರೆಯುತಾಶ್ರಯವಿತ್ತು ನಿಂದಿವೆ ಸೊಗದೊಳೀವನದಿ ॥
ಬರುವ ಪ್ರೇಕ್ಷಕರೆಲ್ಲ ಸತತವು ।
ಹರುಷ ಹೊಂದುತ ಶಾಂತಿ ಪಡೆವರು ।
ಪರಿಪರಿಯ ದೃಶ್ಯಗಳ ನೋಡುತ ಸುಖವ ಪೊಂದುವರು । ೨ ॥

ವನದ ಕೆಳಗಿಹ ಬಯಲು ಹೊಲಗಳು ।
ತೆನೆಗಳಿಂ ರಾರಾಜಿಸುತಲಿವೆ ।
ವಿನಯದಿಂ ತಲೆಬಾಗುತಲಿ ಸುಸ್ವಾಗತಿಪ ತೆರದಿ ॥
ಅನತಿ ದೂರದಿ ನೋಡುತಿರೆ ಕಾ ।
ನನದ ಮೇಲ್ ಜಲಪಾತ ಕಾಂಬುದು ।
ಮನವನರಳಿಸಿ ಮುಗ್ಧಗೊಳಿಪಾ ಪರಿಯನೇನೆಂಬೆ ॥ ೩ ॥

ಮನದ ಸಂತಸದಿಂದ ಪ್ರತಿಧ್ವನಿ ।
ಧ್ವನಿಸುತಿದೆ ಪಿಕ, ಕೀರವಾಣಿಯು ।
ಧ್ವನಿತರಂಗವು ದುಂಬಿ ಶ್ರುತಿಯೊಡನವಿಲನರ್ತನವು ॥
ಮನದ ಭ್ರಾಂತಿಯೊ? ಪ್ರಕೃತಿ ಮಾಯೆಯೊ?
ಮನುಜವರ್ಗದ ಭಾಗ್ಯದುದಯವೊ?
ಅನುದಿನದ ಕೃಷಿಕಾಯ ಕಷ್ಟಕೆ ದೊರೆತ ಸಂಪದವೋ ॥ ೪ ॥

ಫಲಭರಿತವಹ ಕಲ್ಪವೃಕ್ಷಗ ।
ಳಖಿಲ ಸೇವೆಯ ತೆರದಿ ನಿತ್ಯವು ।
ಬಳಲಿದವರನು ತೃಪ್ತಿಗೊಳಿಸಲು ಅಮೃತವೀಯುತಿವೆ ॥
ಚೆಲುವಿನಾ ಸೌಂದರ್ಯ ಸಾಗರ ।
ಮಲೆಯನಾಡ ನಿಸರ್ಗ ಶೋಭೆಯು ।
ಕೆಲವರಾದರು ನೋಡುತಚ್ಚರಿಪಡುತ ಹರ್ಷಿಸಲಿ ॥ ೫ ॥

"ಕವಿರುದ್ರಪ್ಪನವರ" ಸುತ್ತುಮುತ್ತಣ ಸೃಷ್ಟಿಸೌಂದರ್ಯವನ್ನು ಕಂಡು ರಚಿಸಿದುದು.

ಕವಿಯ ಹೃದಯವೀಣೆ

ಸಾಹಿತ್ಯಾರಾಧನೆಯನು ಮಾಡುವೆ ।
ಸಾಹಿತ್ಯೋತ್ಸವವನು ಗೈವೆ ॥
ಸಾಹಿತ್ಯದಿ ಜ್ಞಾನಾರ್ಜನೆ ಮಾಡುತ ।
ಸಮಾಜಸೇವೆಯ ನಾಗೈವೆ ॥ ೧ ॥

ಸಂಸ್ಕೃತಿಯನು ಸಾಹಿತ್ಯದಿ ಬಿಂಬಿಸಿ ।
ಮಾನವ ಧರ್ಮವ ಬೋಧಿಸುವೆ ॥
ನವಿನುಡಿಭಾವರಸಾದಿಗಳಿಂದಲಿ ।
ಸುವಿಚಾರಂಗಳ ಪೋಣಿಸುವೆ ॥ ೨ ॥

ಮಹಾತ್ಮರಾಗುಣ ವರ್ಣನೆ ಮಾಡುತ ।
ಸತ್ಪಥವನು ನಾ ರೂಪಿಸುವೆ ॥
ಮಾನವತೆಯ ಪಂಚಾಕ್ಷರಿ ಮಂತ್ರವ ।
ಕವಿತಾರೂಪದಿ ಬೋಧಿಸುವೆ ॥ ೩ ॥

ಶ್ರದ್ಧಾಭಕ್ತಿಯೊಳೀಶನ ಪ್ರಾರ್ಥಿಸಿ ।
ಆತ್ಮ ಶುದ್ಧಿಯನು ಸಾಧಿಸುವೆ ।
ಪರರಿಂಗುಪಕಾರಂಗಳ ಮಾಡುತ
ಆತ್ಮೋನ್ನತಿಯನು ನಾ ಪಡೆವೆ ॥ ೪ ॥

ಶಬ್ದಾಭರಣಾದ್ಯುಪಮಾಲಂಕೃತ ।
ಕಾವ್ಯ ಕನ್ನಿಕೆಯ ಸೃಷ್ಟಿಸುವೆ ।
ನೈಜ ಭಾವದಿಂ ಹೃದಯಸ್ಪಂದನ ।
ಗೊಳಿಸುವ ಚೇತನ ತುಂಬಿಸುವೆ ॥ ೫ ॥

ಛಂದೋಲಂಕಾರಾದಿಯ ಸೂತ್ರದಿ ।
ಮಾತ್ರಾಗಣಗಳ ನಿಲ್ಲಿಸುವೆ ।
ಪ್ರಾಸಾಕ್ಷರದಿಂ ಪ್ರಾಣವ ನೀಡುತ ।
ಕಾವ್ಯರತ್ನವನು ಬೆಳಗಿಸುವೆ ॥ ೬ ॥

ಸರ್ವಾಂಗವ ಸುರಸುಂದರಿಯಂದದಿ ।
ಸೌಂದರ್ಯದಿ ಕಳೆಗೂಡಿಸುವೆ ।
ವರ ಸೌಗಂಧವ ಚಂದದಿ ಪೂಸುತ ।
ಆತ್ಮಾನಂದವ ನಾಂ ಪಡೆವೆ ॥ ೭ ॥

ಚಂದಿರವದನೆ ಸುಹಾಸಿನಿ ಸುಂದರಿ ।
ಮನಮೋಹಿನಿ ಯಿವಳಾರಿಹಳು ?
ನವಭಾವಂಗಳ ದರ್ಶಿಸಿ ನಲಿಯುವ ।
ವೀಣಾಪಾಣಿಯು ಅವಳಿಹಳು ॥ ೮ ॥

ಚಿಂತೆಯನೋಡಿಸಿ ಮನವನು ರಮಿಸುತ ।
ಜ್ಞಾನಾಮೃತವನ್ನೆರೆಯುವಳು ।
ಆತ್ಮಾನಂದದ ಮುಕ್ತಿಯನೀಯಲು ।
ಕವಿತಾರೂಪದಿ ಬಂದಿಹಳು ॥ ೯ ॥

ಅವಳೇ ಸರಸತಿ ಅವಳೇ ಶಾರದೆ ।
ಅವಳಾ ಸೇವೆಯ ನಾ ಗೈವೆ ।
ಅವಳಾ ಪ್ರೇಮದ ಕರೆಯನ್ನಾಲಿಸಿ ।
ಮುನ್ನಡೆಸನ್ನುತ ಪೊಡಮಡುವೆ ॥ ೧೦ ॥

ಮಲೆನಾಡ ದರ್ಶನ

ಮಲೆನಾಡ ವೈಭವವ ನೋಡೋಣ ಬನ್ನಿ ।
ಮಲೆನಾಡಿಗರಕೂಡೆ ಕಲೆಯೋಣ ಬನ್ನಿ ।
ಮಲೆನಾಡೆ ಚೆಲುವಿನಾ ತವರು ಮನೆಯಂತೆ ।
ಮಲೆನಾಡೆ ಸಂಪತ್ತಿನಾ ನಿಧಿಯದಂತೆ ॥ ೧ ॥

ಸೃಷ್ಟಿಯಾ ನಿಜಶೋಭೆ ಮನತಣಿಪುದಂತೆ ।
ಸೃಷ್ಟಿದೇವತೆಯೊಲಿದು ನರ್ತಿಸುವಳಂತೆ ॥
ಥಳಕಿಲ್ಲ ಬೆಳಕಿಲ್ಲ ನಿಜಶೋಭೆಯಂತೆ ।
ಬೆವರಿಳಿಸಿ ದುಡಿಯುತ್ತ ಶ್ರಮಪಡುವರಂತೆ ॥ ೨ ॥

ಕಡುದುಗುಡ ದಾರಿದ್ರ್ಯವೇನಿರಲಿ ಚಿಂತೆ ।
ಬಂದಿರುವ ಅತಿಥಿಗಳ ಸತ್ಕರಿಪರಂತೆ ॥
ತೆಂಗಡಿಕೆ ಭತ್ತಬೆಳೆ ಬರುತಿರುವುದಂತೆ ।
ಮಂಗ ಮೃಗಗಳ ಬಾಧೆ ಮನಕೊರೆವುದಂತೆ ॥ ೩ ॥

ಗಿರಿಬೆಟ್ಟ ಕಾನನದ ನೋಟವದು ಸೊಗಸು ।
ಜಾಜಿ ಮಲ್ಲಿಗೆ ಸುರಗಿ ಗಮಗಮಿಸುತಿಹವು ॥
ತಾವರೆಯು ನೈದಿಲೆಯು ಮಧುಪುಷ್ಪ ಗುಚ್ಛ ।
ತನಿಗಂಪ ಬೀರುತ್ತ ಮೋಹಿಸುತಲಿಹವು ॥ ೪ ॥

ಶುಕವಚನ ಪಿಕಗಾನ ಮಾಧುರ್ಯ ಕೇಳಿ ।
ನದಿನಾಲೆ ಜಲಪಾತಗಳ ಮೊರೆತಕೇಳಿ ॥
ಕಬ್ಬಿನಾರಸವೇನು? ಸೌರಭವದೇನು?
ರಸಬಾಳೆ ದಾಳಿಂಬ ರಸಫಲಗಳೇನು? ॥ ೫ ॥

ವೇದಶಾಸ್ತ್ರ ಪುರಾಣ ಮೀಮಾಂಸಗಳಲಿ ।
ಶ್ರೇಷ್ಠ ಪಂಡಿತರಿಹರು ಮಲೆನಾಡಿನಲ್ಲಿ ॥

ಗಾನನಾಟ್ಯ ಕಲಾದಿ ಕಾವ್ಯವಾಹಿನಿಯು ।
ನಾದದಿಂ ಹರಿಯುತಿದೆ ಮಲೆನಾಡಿನಲ್ಲಿ ॥ ೬ ॥

ರೂಪವತಿ ನಾರಿಯರು ಗುಣಸುಂದರಿಯರು ।
ಚೆಲುವೊಲವಿನಿಂ ಗೃಹವ ಬೆಳಗಿಸುತಲಿಹರು ।
ಜ್ಞಾನ, ಮಾನವು, ಮಮತೆ ಸಮತೆಯಿಂದಿರಲು ।
ಮಾನಿನಿಗೆ ಮತ್ತೇನು ಬೇಕೆನುವರವರು ॥ ೭ ॥

ಮಲೆನಾಡಿ ನಾದ್ಯಂತ ಸಂಚರಿಸದಿರಲು ।
ಮಲೆನಾಡ ಸಹಜತೆಯನದ ತಿಳಿವುದೆಂತು ॥
ಮಲೆನಾಡ ಸುಖದುಃಖ ಸೋಜಿಗವದೇನು ?
ನೆಲೆಯೂರಿ ನೋಡಿದರೆ ಮನಗಾಣದೇನು ? ॥ ೮ ॥

ಮಾತೃಭೂಮಿ ನಮೋನಮಃ

ಓಂ ನಮೋ ಭೂದೇವಿ ಸಕಲಸಂಪದ್ಭರಿತೆ ।
ಓಂ ನಮೋ ಭೂಮಾತೆ ವರಜನ್ಮದಾತೆ ।
ಓಂ ನಮೋ ಸಂಗೀತದಾನಂದದಿಂ ವಿನುತೆ ।
ಓಂ ನಮೋ ಗಂಭೀರೆ ವೀರ ವಿಖ್ಯಾತೆ ॥ ೧ ॥

ಜೀವಕೋಟಿಗಳಿಂಗೆ ಆಶ್ರಯವನಿತ್ತಿರುವೆ ।
ಭಾವರಸ, ಜೀವ ನೀನಾಗಿರುವೆ ತಾಯೆ ।
ನಿನ್ನ ಕರುಣಾಮೃತದಿ ಬಾಳಿ ಬೆಳಗಿಹರೆಲ್ಲ ।
ನಿನ್ನ ಸೇವೆಯ ಗೈದು ಹರ್ಷಿಪೆವು ಕಾಯೆ ॥ ೨ ॥

ಕೃಷಿಗೈದು ಶ್ರಮದಾನ ಮಾಡಿ ಸಂತಸ ಪಡುವೆ ।
ಋಷಿಯಂತೆ ತಾಯ್ನಾಡ ನುಡಿ ಸೇವೆ ಮಾಳ್ಪೆ ।
ಕರ್ಣಮಧುರಸ್ವರದ ಕನ್ನಡಾ ಭೂಷಣವೆ ।
ಸ್ವರ್ಣ ಗರ್ಭೆಯೆ ನಿನ್ನ ಸಿಂಗಾರ ತಿಳಿವೆ ॥ ೩ ॥

ಕನ್ನಡಿಗರಾಕಾಂಕ್ಷೆ ಕೈಗೂಡುತಿಹುದಿಂದು ।
ಕನ್ನಡಿಗರಾತಪವು ಫಲಿಸುತ್ತಲಿಹುದು ॥
ಕನ್ನಡದ ನೆಲಗಟ್ಟು ಪೂರ್ಣವಾಗುತ ಬಂದು ।
ಕನ್ನಡದ ಹಿರಿಯ ಮನೆ ರೂಪುಗೊಂಡಿಹುದು ॥ ೪ ॥

ಕನ್ನಡದ ಸಾಹಿತ್ಯ ಸಂಗೀತ ಕಲೆಗಳಾ ।
ಉನ್ನತಿಗೆ ಮೂಲ್ಯವಿದು ಸೋಪಾನವಿಹುದು ।
ಕನ್ನಡದ ಗೃಹದಲ್ಲಿ ಕನ್ನಡಿಗರೊಂದಾಗಿ ।
ಔನ್ನತ್ಯ ಪಥ ಪಿಡಿದ ಸಂಭ್ರಮವಿದಿಹುದು ॥ ೫ ॥

ಶಿಲ್ಪಕಲೆ ಸಾಹಿತ್ಯ ಸಂಗೀತ ನಾಟ್ಯಾದಿ ।
ಲಲಿತಕಲೆಗಳ ಕೀರ್ತಿ ಪಸರಿಸಿಹನಾಡು ।
ವೇದಾಂತ ತತ್ವವನು ರಾಜತಂತ್ರವನರಿತ ।
ಮೇಧಾವಿಗಳ ಪಡೆದು ಪೆಸರ್ಗೊಂಡನಾಡು ॥ ೬ ॥

ಕನ್ನಡಿಗರೀನಾಡು ನಮ್ಮ ಕನ್ನಡನಾಡು ।
ಜನ್ಮಭೂಮಿಯು ನಮ್ಮ ಸಂಸ್ಕೃತಿಯ ಬೀಡು ।
ಸಂಘಶಕ್ತಿಯು ಬಲದೊಳೀನಾಡ ಸೇವೆಯನು ।
ಮಾಡುವೆವು ಎಡೆಬಿಡದೆ ಸನ್ಮತಿಯನೀಡು ॥ ೭ ॥

ಕನ್ನಡದ ನವರಾಜ್ಯಗೃಹಪ್ರವೇಶದಿ ಬಂದು ।
ಪ್ರಾರ್ಥಿಪೆವು ಓತಾಯೆ ಹರಸೆಮ್ಮ ನಿಂದು ।
ಬಂಧು ಭಗಿನಿಯರ್ಗೆಲ್ಲ ಇದುವೆ ಸುಸ್ವಾಗತವು ।
ಬನ್ನಿರೆಲ್ಲರು ಮುದದಿ ತಾಯ್ನಾಡಿಗಿಂದು ॥ ೮ ॥

ಕರ್ನಾಟಕ ಪ್ರಾಂತ ನಿರ್ಮಾಣದ ಸಂದರ್ಭದಲ್ಲಿ ರಚಿಸಿದುದು.

ಅಂತರಂಗ

ಅನ್ನವೇ ಸರ್ವತ್ರ ಬಲು ಮುಖ್ಯವಿಹುದು ।
ಅನ್ನವೇ ಜೀವನದ ಜೀವಾಳವಿಹುದು ।
ಹಸಿವಿಲ್ಲದಿರುವಾಗ ರುಚಿಯಿಲ್ಲವಂತೆ ।
ಹಸಿದಾಗ ಲಭಿಸಿದುದು ಪರಮಾನ್ನವಂತೆ ॥ ೧ ॥

ಶ್ರಮವಹಿಸಿ ದುಡಿಯುತಿರೆ ಸುಖಸೌಖ್ಯವಿಹುದು ।
ಶ್ರಮರಹಿತ ಜೀವನದಿ ಸುಖವೆಲ್ಲಿಯಿಹುದು ।
ಕಷ್ಟದಿಂಗಳಿಸಿದಾ ಸುಖವದುವೆ ಮೇಲು ।
ಕಷ್ಟವಿಲ್ಲದೆ ದೊರೆತ ಸುಖವದುವೆ ಕೀಳು ॥ ೨ ॥

ಉನ್ನತಿಯ ಸ್ಥೈದುತಿರಲಾಗಿಲ್ಲ ಚಿಂತೆ ।
ಅವನತಿಯ ಸ್ಥಿತಿಗಿಳಿಯಲಾಗಲ್ಲಿ ಚಿಂತೆ ।
ಜೀವನದಿ ಸುಖ ದುಃಖ ಸಮವೆಣಿಸಬೇಕು ।
ಸುಖದಿಂದ ಸುಖಪಡುವ ಜೀವನವು ಸಾಕು ॥   ॥

ಕಂಡದ್ದು ಕಂಡಂತೆ ಹೇಳಿದರೆ ರೋಷ ॥
ಕಂಡದ್ದು ಕಾಣದ್ದು ಬೆರಸಿದೊಡೆ ತೋಷ ।
ಬಂಡಿಯನ್ನವ ಗುಂಡ ಹೊಡೆದನೆನಲಾಗ ।
ಬಂಡಿ ತುಂಬದ ನಗೆಯು ದುಕ್ಕುವುದು ಜೇಗ ॥ ೪ ॥

ಸತ್ಯಕ್ಕೆ ಸೋಲಿಲ್ಲ ಶಾಶ್ವತವು ದಿಟವು ।
ನಿತ್ಯವದನಾಚರಿಸದಿರುತಿಹುದೆ ಚಟವು ।
ಸತ್ಯಧರ್ಮದಿ ನಿತ್ಯ ನಡೆಯುತಿರಬೇಕು ।
ಸ್ತುತ್ಯಕಾರ್ಯದೊಳಾತ್ಮವನು ಸುಖಿಸಬೇಕು ॥ ೫ ॥

ಹೆಣ್ಣಿಲ್ಲದಾ ಬಾಳ ನೌಕೆಯುದ ನೋಡಿ ।
ಸುಣ್ಣವಿಲ್ಲದ ವೀಳ್ಯದಾಸಪಿಗೆ ಜೋಡಿ ।
ಗುಣನಡತೆ, ಮಾನವತೆ, ಸಂಸ್ಕೃತಿಯು ನಾಡಿ ।
ಬಲಗೊಂಡು ದೃಢತೆಯನು ಬಿಂಬಿಸಲಿಕೂಡಿ ॥ ೬ ॥

ಹಲ್ಲಿಲ್ಲದಿರಲಾಗ ಕಡಲೆಯದು ಏಕೆ ?
ಧನವಿರದೆ ವಿದ್ಯೆಯಿರೆ ಮಾತ್ಸರ್ಯವೇಕೆ ?
ಈ ವಿಧದ ವೈಚಿತ್ರ್ಯ ಜನದಂತರಂಗ ।
ಜೀವನವೆ ನಾಟಕವು ಜಗನಾಟ್ಯರಂಗ ॥ ೭ ॥

ಮೋಹನಾಸ್ತ್ರ

ಚಿಗರಿಗಂಗಳ ಸುರಸುಗಂಧಿನಿ ।
ಬಂದಳತಿ ಮುದ ಬೀರುತ ।
ಇಂದ್ರನಾಜ್ಞೆಯ ನಾಂತು ಪೊರಟಳು ।
ಮಂದ ಹಾಸದಿ ನಲಿಯುತ ॥ ೧ ॥

ಅರಳಿದಾ ಕೆಂದಾವರೆಯ ಪರಿ ।
ಬೆಳಗುತಿರಲವಳಾನನ ।
ನವಿಲಿನಾ ನಲಿದಾಟದಂತಿರೆ ।
ಚಲನ ವಲನದ ನರ್ತನ ॥ ೨ ॥

ಕೊರಳಕೊಂಕಿಪ ರೀತಿಯದುಮುಂ ।
ಗುರುಳ ತೀಡುವ ದೃಶ್ಯವು ।
ಹೊರಳಿ ಬೀರುವ ಸ್ನೇಹದೃಷ್ಟಿಯು ।
ಮನವ ಸೆರೆಹಿಡಿವಾಟವು ॥ ೩ ॥

ಉತ್ತಮಾಸನದೇಕಚಿತ್ತದಿ ।
ಕುಳಿತ ಮುನಿತಾ ತಪದಲಿ ।
ಸಿಡಿಲು ಬಿದ್ದರು ತಿಳಿಯದಂದದಿ ।
ಮಗ್ನನಾಗಿರೆ ಜಪದಲಿ ॥ ೪ ॥

ಅಶನವಸನಾಕಾಂಕ್ಷೆಯಿಲ್ಲದೆ ।
ಹಲವು ವರುಷಗಳಿಂದಲಿ ।
ಧ್ಯೇಯಸಾಧನೆಗಾಗಿ ಮೋಹವ ।
ತ್ಯಜಿಸಿ ಕುಳಿತಿರೆ ಹಟದಲಿ ॥ ೫ ॥

ನಾಟ್ಯವಾಡುತ ರಮಣಿ ಬಂದಳು ।
ಮಧುರಸ್ವರದಿಂ ಪಾಡುತ ।
ತಾಪಸೋತ್ತಮನೆದುರುನಿಂತಳು ।
ತಾಳಲಯದಿಂ ಕುಣಿಯುತ ೬ ॥

ಪುಷ್ಪಹಾರವ ಪಿಡಿದು ಕೈಯೊಳ ।
ಗರ್ಪಿಸುವೆ ನಿನಗೆನ್ನುತ ।
ಪುಷ್ಪಶೋಭಿತೆಯವಳು ತಪಸಿಯ ।
ಸನಿಹ ಬಂದಳು ನಾಚುತ ೭ ॥

ಮುತ್ತು ಸುರಿವುದೊ ಅವಳ ನಗೆಯಲಿ ।
ಸೆಳೆದುಚಿತ್ತವ ಭ್ರಮಿಪುದೊ ।
ಮುಡಿಯ ಪುಷ್ಪ ಸಮೂಹ ಸೌರಭ ।
ಭ್ರಮರಗಳ ಬರಸೆಳೆವುದೊ ॥ ೮ ॥

ನಗುತನಲಿನಲಿದಾಡಿ ಪಾಡಿದ ।
ಳಾಗ ಮೋಹನ ರಾಗವ ।
ಮೋಹಕಸ್ವರವದರ ಪಡಿದನಿ ।
ಮೋಹಿಸಿರೆ ವನವೆಲ್ಲವ ॥ ೯ ।

ತಾರಕದಿ ಸ್ವರ ವಿಹರಿಸುತ್ತಿರೆ ।
ಗಾನತಾನ ತರಂಗದಿ ।
ಭೂಪ ಶ್ರೀರಾಗಾದಿಗಳೆ ಮೃದು ।
ಜೀವಸ್ವರಗಳ ಮಿಲನದಿ ॥ ೧೦ ॥

ಇಂತು ಬಹುವಿಧ ಗಾನನಾಟ್ಯದಿ ।
ಬಹಳ ವೇಳೆಯು ಕಳೆಯಲು ।
ಸಫಲಳಾಗದೆ ಯೌವನಾಂಗಿಯು ।
ಬಳಲುತಚ್ಚರಿಗೊಂಡಳು ॥ ೧೧ ॥

ಏಕಧ್ಯಾನದೊಳೈಕ್ಯನಾದಾ ।
ಮುನಿಗಶಾಂತಿಯು ಕವಿಯಿತು ।
ಗಾನನಾಟ್ಯ ಸುಗಂಧ ವಾಯುವಿ ।
ನಿಂದ ನೇಮವು ಸಡಿಲಿತು ॥ ೧೨ ॥

ಎಂದೊ ಮುಚ್ಚಿದ ಬಾಹ್ಯಚಕ್ಷುಗ ।
ಳಿಂತು ತೆರೆವವು ಸುಲಭದಿ ।
ಹೆಚ್ಚು ತ್ರಾಸವದಾಯ್ತು ಮುನಿಗಂ ।
ದೆಚ್ಚರಾಗಲು ಬೇಗದಿ ॥ ೧೩ ॥

ಚಲಿಸದಾ ಕಲು ಬೊಂಬೆಯಂದದಿ ।
ಕುಳಿತ ಋಷಿಯನು ಕಾಣುತ ।
ಲಲನೆ ವಿಸ್ಮಿತಳಾಗಿ ನೋಡಿದ ।
ಳೇನು ಮಾಡುವುದೆನ್ನುತ ॥ ೧೪ ॥

ಘೋರ ತಾಪಸಿ ಜ್ಞಾನಮೂರ್ತಿಯ ।
ನೆಂತು ಮೋಹದಿ ಕೆಡಹಲಿ ।
ಸುಂದರಾಂಗನ ಸತ್ಯಗುಣದವ ।
ನೆಂತು ಕೈಪಿಡಿದೊಲಿಸಲಿ ॥ ೧೫ ॥

ಇಷ್ಟು ಸುಂದರ ರೂಪ ಯೌವನ ।
ದಿಂದ ತಪವನು ಕೆಡಿಸದೆ ।
ಮೊಗವ ತೋರಿಸಲೆಂತು ಶಕ್ರಗೆ ।
ಕಾರ್ಯವಿದು ಕೈಗೂಡದೆ ॥ ೧೬ ॥

ಕೊನೆಯ ಬಾಣವಿದೆಂದು ಯೋಚಿಸಿ ।
ಚೆಲುವೆ ಧಿಮಿತಕ ಕುಣಿದಳು ।
ನೂಪುರ ಧ್ವನಿ ರಾಗ ಲಹರಿಯೊ ।
ಳಾಗ ಮಿಗೆ ಮೈಮರೆತಳು ॥ ೧೭ ॥

ಪೂರ್ಣಚಂದ್ರಿಕೆ ಪಾಡುತಿರಲವ ।
ಳಾಗ ಸೌಮ್ಯತೆ ಪಸರಿತು ।
ಮಂದ ಮಾರುತನಿಂದ ವಾತಾ ।
ವರಣ ಶೀತಲವಾಯಿತು ॥ ೧೮ ॥

ಚೆಲುವ ವದನದ ಸುಧೆಯ ಧವಳಿಕೆ ।
ಹಾವಭಾವದ ಮಧುವಿಗೆ ।
ಪ್ರೇಮಗಾನದ ನವಸುಗಂಧಕೆ ।
ಮರೆವು ಬಾರದೆ ತನುವಿಗೆ ॥ ೧೯ ॥

ಪ್ರೇಮದೂಟವನುಣಿಸಬಂದಿಹ ।
ಪ್ರಮದೆ ಮುಂದಿರಲಾಗಲೆ ।
ಬಾಹ್ಯಚಕ್ಷುಗಳಾಗ ಮೆಲ್ಲನೆ ।
ತೆರೆದು ನೋಡಿದುವೈಸಲೆ ॥ ೨೦ ॥

ಭಾರಿ ಸಂತಸಗೊಳ್ಳಲಪ್ಸರೆ ।
ಜಾರಿತವಳೆದೆ ವಸನವು ।
ನಗೆಯ ನಸು ಮಿಂಚೊಂದು ಹೊಳೆಯುತ ।
ಸೊಗಸಿತಾ ಮುಖ ಕಮಲವು ॥ ೨೧ ॥

ಲಜ್ಜೆಯಾಭರಣಂಗಳೆಲ್ಲವ ।
ತೋರಿ ಮೃದುಮಧುಲಾಸ್ಯದಿ ।
ಪ್ರೇಮ ದೃಷ್ಟಿಯ ಬೀರಿ ಕರೆಯುನು ।
ತೋರಿದಳು ವೈಯ್ಯಾರದಿ ॥ ೨೨ ॥

ಪ್ರೇಮನಯನೆಯ ಶುದ್ಧ ಮನದಿಂ ।
ದುಕ್ಕಿ ಬಂದಿಹ ಕರೆಯದು ।
ಎಷ್ಟು ಮಧುರವದೆಷ್ಟು ಮಾದಕ ।
ಎಂತು ಓಗೊಡದಿರುವುದು ॥ ೨೩ ॥

ಇಂತು ಯೋಚಿಸಿ ನೋಡುತಿರ್ದಾ ।
ತಪಸಿಯಾ ವ್ರತ ಸಡಿಲಿತು ।
ಕಾಮಿನಿಯ ಸೌಂದರ್ಯ ನೋಡುತ ।
ಮೋಹಪಾಶವು ಬಿಗಿಯಿತು ॥ ೨೪ ॥

ಮದನನರಗಿಣಿಯುವಳ ತುಂಬಿದ ।
ಕುಂಭಕುಚಗಳ ಸೌಷ್ಠವ ।
ನೋಡುತಾ ಮುನಿಮರುಳುಗೊಂಡನು ।
ಅವಳ ಮೋಹಕ ರೂಪವ ॥ ೨೫ ॥

ಅಮೃತಮಯ ಮುಖಕಮಲಗಾನದ ।
ಮಾಯೆಯಾ ಮೃದುಪಾಶದಿ ।
ಉಗ್ರತಾಪಸಿ ದಿವ್ಯಜ್ಞಾನಿಯು ।
ಸಿಲುಕಿದನು ಅತಿ ಮೋಹದಿ ॥ ೨೬ ॥

ಪೂಜ್ಯ ವಿಶ್ವಾಮಿತ್ರಮುನಿಯಾ ।
ಧ್ಯೇಯ ಸಾಧನೆಯೆಲ್ಲವು ।
ಮೇನಕೆಯ ಸಂಮ್ಮೋಹನಾಸ್ತ್ರದಿ ।
ಭಂಗವಾಯಿತದೆಲ್ಲವು ॥ ೨೭ ॥

ಶಕುಂತಲೆಯ ಬಾಲ್ಯ

["ವಸಂತವಿಹಾರ"ದಲ್ಲಿ ಪ್ರಕಟವಾದುದು]

ಬಾಲೆ ಸುಕೋಮಲೆ ಮುನಿಯಾಶ್ರಮದಲಿ ।
ಲೀಲೆಯೊಳೆಲ್ಲರ ಸುಖಿಸುತಿರೆ ।
ವನದಾ ವರಲತೆಯಂದದಿ ಮೆರೆಯುತ ।
ವಿನಯ ವಿಭೂಷಿತೆ ಯೆನಿಸುತಿರೆ ॥ ೧ ॥

ಪ್ರಾತಃಕಾಲದಿ ಪಾಠಗಳೋದುತ ।
ಸಡಗರದಿಂದಲಿ ಪುಷ್ಪಗಳ ।
ಉದಯಸುರಾಗವ ಪಾಡುತ ಕೊಯ್ವಳು ।
ಪ್ರೇಮದಿ ನವವಿಧ ಪತ್ರಗಳ ॥ ೨ ॥

ಬರುತಿಹ ಅತಿಥಿಗಳೆಲ್ಲರ ತವಕದಿ ।
ಸ್ವಾಗತಿಸುತ್ತಲಿ ಶ್ರದ್ಧೆಯೊಳು ।
ಕಂದಮೂಲ ಫಲಜಲದಿಂದೆಲ್ಲರ ।
ತೃಪ್ತಿಯ ಪಡಿಸುತ ವಿನಯದೊಳು ॥ ೩ ॥

ನಿರ್ಮಲ ಚಿತ್ತದೊಳೀಶನ ಭಜನೆಯ ।
ನಿತ್ಯವು ಬಕುತಿಯೊಳೊಲವಿಂದ ।
ಪಾಡುತಲಿರಲದನಾಲಿಸಿಮೃಗಗಳು ।
ಓಡುತಬರುತಿರೆ ಮುದದಿಂದ ॥ ೪ ॥

ಕ್ರೂರಮೃಗಂಗಳಿಗಂಜದೆ ಕುವರಿಯು ।
ಮೈದಡವುತಲಿರೆ ಪ್ರೀತಿಯೊಳು ।
ಗಾನಸುಧಾಮೃತ ಸವಿಯುತಲಿದ್ದುವು ।
ವೈರವ ಮರೆಯುತ ಸ್ನೇಹದೊಳು ॥ ೫ ॥

ಶುಕಪಿಕ ಪಾರಿವ ಪರಿಪರಿ ಖಗಗಳು ।
ಹಾರುತ ಬರುತಲಿ ಲಹರಿಯೊಳು ।
ಆ ಸುಕುಮಾರಿಯು ಕೋಕಿಲಗಾನವ ।
ಕೇಳುತಲಿದ್ದುವು ತೋಷದೊಳು ॥ ೬ ॥

ಆನನವದು ಚೆಲು ಚಂದ್ರಿಕೆಯಂತಿರೆ ।
ವಾಣಿಯು ವೀಣೆಯ ಧ್ವನಿಯಂತೆ ।
ಲಜ್ಜಾಭಾವದಿ ಶೋಭಿಪ ನಡಿಗೆಯು ।
ಚೆಲುವ "ಮಯೂರಿ"ಯ ಪರಿಯಂತೆ ॥ ೭ ॥

ಸುಂದರಿಯೆನಿಸುತ ಸುಗುಣಗಳಿಂದಲಿ ।
ಸುಂದರರೂಪ ಸುಕಾಂತಿಯಲಿ ।
ಸಮತಾಭಾವದಿ ಸೇವೆಯಗೈಯ್ಯುತ ।
ಮಮತಾವಾಹಿನಿಯೆನಿಸುತಿರೆ ॥ ೮ ॥

ಅತ್ಯಾನಂದದೊಳತಿಥಿಗಳೆಲ್ಲರು ।
ನಿತ್ಯಾನಂದವ ಹೊಂದುತಲಿ ।
ಅವಳಾರೂಪ ಸುಗುಣಗಳ ಸ್ಮರಿಸುತ ।
ಹೊರಡುತಲಿದ್ದರು ಹರಸುತಲಿ ॥ ೯ ॥

ಪುಷ್ಪೋದ್ಯಾವನಕೆರೆಯುತ ನೀರನು ।
ಮುದ್ದಿಸಿ ಪ್ರೇಮದಿ ಹರಿಣಗಳ ।
ಹಂಸಗಳೊಡ ನವಳೀಜನು ಕಲಿಯುತ ।
ಹರ್ಷಿಸುತಿದ್ದಳು ಹಂಸಗಳ ॥ ೧೦ ॥

ಸುಂದರರೂಪ ಸುಶೀಲಗಳಿಂದಲಿ ।
ಚಂದಿರನಂತೆ ಪ್ರಕಾಶಿಸುತ ।
ಬಾಲ್ಯವ ಕಳೆದಳು ಬಾಲೆಶಕುಂತಲೆ ।
ಕಣ್ವಾಶ್ರಮದಲಿ ರಂಜಿಸುತ. ॥ ೧೧ ॥

ಕಣ್ವಾಶ್ರಮದಾ ನವಲತೆಗಳ ಪೋಲ್ ।
ಚೆಲುವೆ ಶಕುಂತಲೆ ಬೆಳೆಯುತಿರೆ ।
ಯೌವನದೊಳು ಕಾಲಿಕ್ಕುತಲಾಕೆಯು ।
ಕಣ್ಮನ ತಣಿಸುತ ಬೆಳಗುತಿರೆ ॥ ೧೨ ॥

ಯೌವ್ವನದ ಅವ್ಯಕ್ತ ಅಭಿಲಾಷೆ

ಕಾನನದೊಳೊಂದು ಮುನಿಯಾಶ್ರಮವು ಮೆರೆಯುತಿದೆ ।
ತಾನಲ್ಲಿ ನೆಲಸಿಹತಪೋನಿಷ್ಠೆಯಿಂದ ।
ಜ್ಞಾನದೀಕ್ಷೆಗಳಿತ್ತು ಮಾನವತೆ ರೂಪಿಸುವ ।
ಜ್ಞಾನಿಗುರು ಶಿಷ್ಯರೊಡನಿರೆ ಹರುಷದಿಂದ ॥ ೧ ॥

ತಂಪಾದ ವನಕುಸುಮ ದುಂಬಿಗಳ ಕಾದಿರಲು ।
ಇಂಪಾದ ಖಗಗಾನ ಮುದಗೊಳಿಸುತಿತ್ತು ।
ಕೆಂಪಾದ ಪ್ರಭೆಯೊಡನೆ ರವಿಮೂಡಿ ಬರುತಿರಲು ।
ಸೊಂಪಾದ ಪುಷ್ಪಲತೆ ತಲೆದೂಗುತಿತ್ತು ॥ ೨ ॥

ಶಿಷ್ಯರೆಲ್ಲರು ಕೂಡಿ ಕುಶತುಲಸಿಗಳ ಕೊಯ್ದು ।
ಋಷ್ಯಾಶ್ರಮಕೆ ತಾವು ಮರಳುತ್ತಲಿರಲು ।
ಪುಷ್ಪಗಳ ಕೊಯ್ಯುತ್ತ ವನಸಖಿಯರೊಡಗೂಡಿ ।
ಪುಷ್ಪವೇಣಿಯು ವನದಿ ಮುಂದೊತ್ತಿಬರಲು ॥ ೩ ॥

ಹರುಷದಿಂ ಬರುತಿರಲು ಹುಲಿ, ಹರಿಣ, ಗೋವುಗಳು ।
ತ್ವರಿತದಿಂ ನವಯುವತಿ ಸಾನ್ನಿಧ್ಯಕಾಗಿ ।
ಮಂದಹಾಸದೊಳಾಕೆ ಸಂತೋಷದಿಂದವನು ।
ಆನಂದದಿಂ ಸ್ಪರ್ಶಿಸಿದಳಾಗಬಾಗಿ ॥ ೪ ॥

ಪಚ್ಚೆಯುಡುಗೆಯ ಧರಿಸಿ ಸ್ವಚ್ಛತನದಿಂ ಬೆಳಗಿ ।
ಹೆಚ್ಚು ಸಡಗರದೊಡನೆ ಮಿಗೆಶೋಭಿಸುತ್ತ ।
ನವನವಸಂತಾಗಮನ ಸೂಚನೆಯಿದೆಂಬಂತೆ ।
ವಸುಧೆ ಸಿಂಗರಗೊಳ್ಳುತಿರೆ ರಂಜಿಸುತ್ತ ॥ ೫ ॥

ಅಂದದಾನವಲತೆಗಳೊಂದೊಂದು ವೃಕ್ಷವನು ।
ಚಂದದಿಂ ಬಿಗಿಡಪ್ಪಿ ಚುಂಬಿಸುತಲಿರಲು ।
ವಿರಹಿಗಳ ಸಂತಾಪಮೆಣೆಯಿಲ್ಲದೇರುತಿರೆ ।
ಹರಿಣಗಳು ಸಂತವಿಸಲೆಂಬಂತೆ ಬರಲು ॥ ೬ ॥

ಜಲತರಂಗದಿ ಧ್ವನಿಪ "ಹಂಸಧ್ವನಿ" ಯಾರಾಗ ।
ಕಲಹಂಸ ಧ್ವನಿಜಲದಿ ಪ್ರತಿಧ್ವನಿಸುತಿರಲು ।
ಬಕತಾಳ ದುಂಬಿಶ್ರುತಿ ತಂಬೆಲರ ತಾನದಿಂ ।
ಸುಖವಾಗಿ ನರ್ತಿಪ ಮಯೂರಗಳ ಸಾಲು ॥ ೭ ॥

ಚಂದದಿಂದೆಲ್ಲವನು ನೋಡುತ್ತ ಸಂತಸದಿ ।
ಮಂದಗಾಮಿನಿಯುವಳು ಮುನ್ನಡೆಯುತಿರಲು ।
ಪುಣ್ಯಭೂಮಿಯ ವನದ ಸೌಂದರ್ಯ ಶೋಭಿಸುತ ।
ಕಣ್ಮನಕೆ ಸಾನಂದ ಸುಖನೀಡುತಿರಲು ॥ ೮

ಕಮಲಪತ್ರದರೂಪ ಪ್ರತಿಬಿಂಬ ಪಾದಗಳು ।
ಕಮಲದಾ ನಿಜಕಾಂತಿ ಕರಕಮಲಗಳಲಿ ।
ಸುಮಸುಶೋಭಿತ ಕೇಶಸೌಂದರ್ಯದಾ ರಾಶಿ ।
ಕಮನೀಯ ಚೂರ್ಣಕುಂತಳ ರೂಪರಾಶಿ ॥ ೯ ॥

ಷೋಡಷಿಯ ನವಕಾಂತಿ ನವರತ್ನ ಪ್ರಭೆಯಂತೆ ।
ಗಾಢಾಂಧಕಾರಮಂ ಸದೆಬಡಿಯುವಂತೆ ।
ತಾವರೆಯ ಮೊಗ್ಗುಗಳ ನಾಚಿಪಾ ಕುಚಯುಗವು ।
ಪ್ರಭೆಗಾಗಿ ಕಾತರಿಪ ಜಲಪುಷ್ಪದಂತೆ ॥ ೧೦ ॥

ಪೂರ್ಣೇಂದು ಮುಖಿಯ ನಗೆ ಬಕುಳದಾಪರಿಮುಗುಳು ।
ಪೂರ್ಣೇಂದು ಶೀತಲತೆ ಶಾಂತತೆಯ ನಿಧಿಯು ।
ಕರ್ಣಮಧುರ ಸ್ವರವು ಕೋಗಿಲೆಯ ಧ್ವನಿಯಂತೆ ।
ಸೌಂದರ್ಯ ಸೌಗಂಧ ಗಾಂಭೀರ್ಯ ಖನಿಯು ॥ ೧೧ ॥

ಅನುಪಮಾಂಕಿತ ಕನ್ಯೆ ಮಾಧುರ್ಯಮಯಿಯಿವಳು ।
ವಿನಯವಿದ್ಯಾವಿಭೂಷಿತೆಯು ಘನವಂತೆ ।
ಸ್ತ್ರೀರತ್ನಗಳಲೊಂದು ವರರತ್ನವೆಂದೆನಿಸಿ ।
ಬೆಳಗುತಿರೆ ಯೌವನದಿ ಮರಿಯಾನೆಯಂತೆ ॥ ೧೨ ॥

ನಾರುಮುಡಿ ಸೆರಗದನು ತುಂಬಿದೆದೆಗೆಳೆವಾಗ ।
ನೀರೆನೋಡಿದಳೊಂದು ಬಸವಳಿದಲತೆಯ ।
ವೃಕ್ಷದಾಶ್ರಯವಿರದೆ ವಿರಹದಿಂ ಬಿದ್ದಿರುವ ।
ಪುಷ್ಪವತಿ ಪುಷ್ಪಿಣಿಯು ಪಡುತಿರುವ ವ್ಯಥೆಯ । ೧೩ ॥

ಕಡುಮೋಹದನುಕಂಪದಿಂದೆತ್ತಿ ಪುಷ್ಪಿಣಿಯ ।
ಬಿಡು ಚಿಂತೆಯೆಂದೆನುತ ಯೋಚಿಸಿದಳಬಲೆ ।
ಯೌವನದ ಮಧುಲತೆಗೆ ವೃಕ್ಷದಂತಿಹ ಪ್ರಿಯನು ।
ರಕ್ಷಿಸಲು ಇಲ್ಲದೊಡೆಯೆಂತೆಂದಳಬಲೆ ॥ ೧೪ ॥

ಇಂತುಸುರಿ ಕುಳಿತಿರ್ದ ಆಚೆಲುವೆಗಾಕ್ಷಣದಿ ।
ಲಜ್ಜೆಯಾವರಿಸುತ್ತ ಕಿರುನಗೆಯು ಮೂಡಿ ।
ಉಬ್ಬಿದೆದೆ ಭಾರದೊಡನವ್ಯಕ್ತ ಅಭಿಲಾಷೆ ।
ಯೊಂದುದಿಸುತಿದ್ದಿತಾ ಕೋಮಲೆಯ ಮನದಿ ॥ ೧೫ ॥

ವನಸಖಿಯರಾಗಮಿಸಿ ತಿಳಿಹಾಸ್ಯದಿಂದವಳ ।
ಮನತಣಿಸಿ ರಮಿಸುತಿರೆ ನಗೆಗುಲ್ಲಿನೊಡನೆ ।
ಯೌವನದ ಕಾಂಕ್ಷೆಯನ್ನರಿತಾ "ಶಕುಂತಲೆ"ಯು ।
ಮೌನದಿಂ ಬೇಡಿದಳು ಪರಮೇಶನೊಡನೆ ॥ ೧೬ ॥

ಪ್ರೇಮಾನುರಾಗ

ಗ್ರೀಷ್ಮಋತುವಿನ ಪ್ರಖರ ಬೇಗೆಯಿಂ ಬಸವಳಿದು ।
ಪ್ರಕೃತಿ ಚೆಲ್ವಿಕೆಯೆಲ್ಲ ಬಾಡಿದಂತಿರಲು ।
ಬಾಯಾರಿದವರಿಂಗೆ ನೀರಿನಾತುರದಂತೆ ।
ವೃಕ್ಷಲತೆ ಪುಷ್ಪಗಳು ಕಾತರಿಸುತಿರಲು ॥ ೧ ॥
ವನದೇವಿಯಂತಿರ್ದ ಕೋಮಲಾಂಗಿಯು ಸಖಿಯ ॥
ರೊಡಗೂಡುತಾಗಮಿಸಿ ಬಿಂದಿಗೆಯ ಸಹಿತ ॥
ಬಾಡಿದಾಲತೆಗಳನು ನೋಡುತ್ತ ಬಿಸುಸುಯ್ದು ।
ಮಮತೆಯಿಂ ನೀರೆರೆಯೆ ಗೆಳತಿಯರ ಸಹಿತ ॥ ೨ ॥
ಶ್ರಮವಹಿಸಿ ನೀರೆರೆದು ದಣಿದ ಸುಂದರಿಯವಳು ।
ಸಂಜೆ ನೇಸರಬಣ್ಣದಿಂದಾಗ ಬೆಳಗೆ ।
ಸಡಿಲಿದಾ ಮುಡಿಕೇಶರಾಶಿಯದು ಚದರಿರಲು ।
ಮರುಕದಿಂ ತಂಗಾಳಿ ಬೀಸಿತವಳೆಡೆಗೆ ॥ ೩ ॥
ಉಬ್ಬಿದಾ ಸ್ತನಗಳನು ಬಿಗಿಹಿಡಿದ ಕಂಚುಕವ ।
ನೆಳೆಯುತ್ತ ಸಖಿಯೊಡನೆ "ಸಡಿಲಿಸಿದ" ನೆನಲು ।
ನಸುನಗುತ ರವಕೆಯನು ಸಡಿಲಿಸಿದ ಸಖಿಯರೆಡೆ ।
ದೃಷ್ಟಿಬೀರುತ ತರುಣಿ ತಾ ನಾಚುತಿರಲು ॥ ೪ ॥
ಜವ್ವನದ ಏರಿಕೆಯೊಳುಬ್ಬುತಿದೆಯೆದೆಯದಕೆ ।
ತೊಟ್ಟರವಕೆಯ ಬರಿದೆ ದೂಷಿಸುವೆಯೇಕೆ ।
ಸೆಟೆದುನಿಂದಿಹ ನಿನ್ನ ಕುಚಗಳೇನ್ ಸೊಗಸಿಹವು ।
ಸಖಿಯೆ ನಿಂದಿಸು ನಿನ್ನ ತುಂಬು ಯೌವನಕೆ ॥ ೫ ॥
ಇಂತು ನುಡಿದಾ ಸಖಿಯರಾಹಾಸ್ಯದಿಂ ಯುವತಿ ।
ಲಜ್ಜೆಯಿಂ ಮುದುಡುತ್ತ ಮುದಗೊಂಡಳಾಗ ।
ಸರಸರನೆ ಮುನ್ನಡೆದು ಬಿಂದಿಗೆಯ ತುಂಬಿಸುತ ।
"ವನಜ್ಯೋತ್ಸ್ನೆ" ಬಳಿಸಾರಿ ನೀರೆರೆದಳಾಗ ॥ ೬ ॥

ಪುಷ್ಪವತಿ ವನಜ್ಯೋತ್ಸ್ನೆ ಯುಪಭೋಗದಾತುರದಿ ।
ಅನುರೂಪವರವೃಕ್ಷವನು ಮೋಹಿಸಿರಲು ।
ವೃಕ್ಷಲತೆ ಜೋಡಿಯುದ ನೋಡುತ್ತ ನಿಂತಿರ್ದ ।
ಗೆಳತಿಯಂ ಕಂಡು ಜೊತೆಗಾತಿಯರು ನಗಲು ॥ ೭ ॥

ಪರಿಹಾಸ್ಯವೇಕೆ ಸಖಿನೋಡು ಈ ನವಲತೆಯು, ।
ಒಲಿಸಿಕೊಂಡಿಹಳ್ಗೋರ್ವ ಸಂಗಾತಿಯನ್ನು ।
ಆದರ್ಶವಿದ ನೋಡಿ ಹಿಗ್ಗುತಾಶಿಪೆ ನಿಂತು ।
ಎಂದುಸುರಿದಾ ನಳಿನಿ ಮುದ್ದಿಸಿದಳದನು ॥ ೮ ॥

ವರಭೂಪ ದುಷ್ಯಂತ ಬೇಟೆಯಾಡುತ ಬಂದು ।
ಹರಿಣಮಂ ಬೆನ್ನಟ್ಟಿ ಬಂದಿರ್ದನಲ್ಲಿ ।
ಆಶ್ರಮದ ಮೃಗವೆಂಬುದನ್ನರಿತು ಬಿಡುತದನು ।
ವಿಶ್ರಾಂತಿ ಪಡೆಯಲ್ಕೆ ಕುಳ್ಳಿರ್ದನಲ್ಲಿ ॥ ೯ ॥

ಕರ್ಣ ಮಧುರಸ್ವರದ ಸರಸಸಲ್ಲಾಪಗಳ ।
ಕೇಳುತ್ತಲಾಶ್ಚರ್ಯಪಡುತಿದ್ದ ಭೂಪ ।
ಮೇಲೆದ್ದು ಮರೆಯಿಂದ ಮೈಮರೆತು ನೋಡಿದನು ।
ತಾರುಣ್ಯದಿಂ ತುಂಬಿ ಕಂಗೊಳಿಪ ರೂಪ ॥ ೧೦ ॥

ಹುಣ್ಣಿಮೆಯ ಚಂದ್ರನಂತೆಸೆವ ಸುಂದರವದನ ।
ಪ್ರೇಮರಸನಿಧಿಯಧರ ಬಿರಿದೆಸಳಿನಂತೆ ।
ನಸುನಗುತಲಿರಲವಳು ಮಲ್ಲಿಗೆಯು ಸುರಿವಂತೆ ।
ಕಂಡು ಒಗ್ಗಿತು ಮನವು ಪುಟಚಂಡಿನಂತೆ ॥ ೧೧ ॥

"ಲಾವಣ್ಯವತಿಯಿವಳು ಋಷಿಕನ್ಯೆಯಂತಿಹಳು ।
ಸ್ತ್ರೀರತ್ನಗಳಲೆಲ್ಲ ರೂಪವತಿಯಿಹಳು ।
ಮೋಹಕಾಮುಗಳನ್ನು ತ್ಯಜಿಸಿದಾ ತಾಪಸಿಗ ।
ಳೆಡೆಯೊಳೀ ಕಾಮಿನಿಯು ಯಾರಿರುವಳಿವಳು ॥ ೧೨ ।

ಈ ವಿಧದಿ ಯೋಚಿಸುವ ಭೂಪಾಲ ಮನದಲ್ಲಿ ।
ಮೋಹಿನಿಯ ರಸವಾಣಿಯನ್ನಾಲಿಸುತ್ತ ।
ನಡೆನುಡಿಗಳಲ್ಲಿ ಬಲು ಹೊರಹೊಮ್ಮುತಿಹಭಾವ ।
ವನ್ನರಿತ ದುಷ್ಯಂತ ಮೈಮರೆತು ಕುಳಿತ ॥ ೧೩ ॥

ಸೌಂದರ್ಯ ಸೌಗಂಧ ನಿಧಿಯಿವಳು ಕೆರೆಗಿಳಿದು ।
ಹರುಷದಿಂ ತುಂಬಿದಳು ಜಲಕುಂಭವನ್ನು ।
ತ್ವರಿತದಿಂದಾ ಜಲವ ಸಖಿಯರಾ ಕೈಗಿತ್ತು ।
ಮರಳಿ ತುಂಬಿಸಿ ಕೊಡುತಲಿರ ಲುದಕವನ್ನು ॥ ೧೪ ॥

ಪುಷ್ಪವತಿ ನವಲತೆಗಳೆಲ್ಲೆಲ್ಲಿ ಇಹವೆಂದು ।
ಈಕ್ಷಿಸುತ ಭ್ರಮರಗಳು ಬಂದಿರಲು ಅಲ್ಲಿ ।
ಆ ಲತಾಂಗಿಯ ಮೊಗವನೋಡಿ ಸುಮವೆಂದರಿತು ।
ಚುಂಬಿಸಲು ಹರುಷದಿಂ ಹಾರುತಿರಲಲ್ಲಿ ॥ ೧೫ ॥

ಬೆದರುತ್ತಲಾಪ್ರಮದೆ ಸಖಿಯರನು ಕರೆಯುತಿರೆ ।
ಲಘುಹಾಸ್ಯದಿಂ ನುಡಿದರಾ ಸಖಿಯರಿಂತು ।
"ಭ್ರಮರಗಳನೋಡಿಸಲು ಭೂಪಾಲನೇ ಬರಲಿ ।
ಮೊರೆಯಿಡಲು ರಕ್ಷಿಸದೆ ಕೈಬಿಡುವನೆಂತು ?" ॥ ೧೬ ॥

ಅಬಲೆಯರ ಪೀಡಿಸುವ ದುಷ್ಟರನು ಶಿಕ್ಷಿಸಲಿ ।
ಮುದಿಸಿದಾ ಭ್ರಮರಗಳು ಹೆದರುವವೆನಮಗೆ ? ।
ದುಷ್ಟರನು ಶಿಕ್ಷಿಸುವ ಅಧಿಕಾರವಾತನದು ।
ಎನುತವರು ಓಡಿದರು ಅಲ್ಲೆ ಬೇರೆಡೆಗೆ ॥ ೧೭ ॥

ಚಪಲೆಯರ ನುಡಿಗಳನು ಕೇಳಿದಾ ದುಷ್ಯಂತ ।
ಮನದಲ್ಲಿ ಮರುಗುತ್ತ ಮುನ್ನಡೆದನಾಗ ।
ಅಧರಾಮೃತವ ಹೀರುತಿವೆಯೆರಗಿ ತುಂಬಿಗಳು ।
ತನಗಿರದೆ ಲಭ್ಯವದು ಎಂದೆನುತ ಬೇಗ ॥ ೧೮ ॥

ಚತುರೆಯರ ಚುಚ್ಚುನುಡಿ ಹಾಸ್ಯವನು ಪ್ರತಿಭಟಿಸಿ ।
ಮೋಹನಾಂಗಿಯು ಚಣದಿ ಮುಂದೋಡಲಾಗ ।
ಬಂದನಾ ದುಷ್ಯಂತನವಳಿಗಭಿಮುಖನಾಗಿ ।
ಚಕಿತಳಾಗುತಲಾಕೆ ನಾಚುತ್ತ ಬೇಗ ॥ ೧೯ ॥

ಆಶ್ರಮಕೆ ಬಂದಿರುವ ಅತಿಥಿಯನು ಸ್ವಾಗತಿಸಿ ।
ಉಪಚಾರ ಮಾಡಿದಳು ಸಖಿಯರೊಡಗೂಡಿ ।
ಸಂತಸದೊಳಾರಾಜ "ಯುವತಿಯಾರಿವಳೆಂದು" ।
ಪ್ರಶ್ನಿಸಲು ಹೇಳಿದರು ಗೆಳತಿಯರು ಕೂಡಿ ॥ ೨೦ ॥

ಕಳ್ಳನೋಟದಿ ನೀರೆ ನೋಡುತಿರೆ ರಾಜನನು ।
ದುಷ್ಯಂತನಾ ದೃಷ್ಟಿ ಜತೆಗೂಡಿತಾಗ ।
ಪ್ರೇಮದೃಷ್ಟಿಯ ಮಿಲನದಿಂ ಮೋಹವುದಿಸಿರಲು ।
ಮದ್ದಾನೆಯೊಂದು ಬರೆ ವಿಘ್ನಬಂತಾಗ ॥ ೨೧ ॥

ಗಲಭೆಯನ್ನೀಕ್ಷಿಸಲು ಹೊರಡುತಿರಲಾ ಭೂಪ ।
ಮರಳಿ ಬರಬೇಕೆನುತ ಬೀಳ್ಕೊಟ್ಟಳಾಗ ।
ತರುಣಿಯಾ ಸವಿನುಡಿಗೆ ತಲೆದೂಗಿ ಭೂಪಾಲ ।
ಬೀಡುಬಿಟ್ಟನು ಸನಿಹ ವನರಕ್ಷೆಗಾಗ ॥ ೨೨ ॥

ಪ್ರೇಮಾನುರಾಗದಿಂ ಪುಳಕಿತೆ ಶಕುಂತಲೆಯು ।
ಕಾಮನುಪಟಳದಿಂದೆ ಕಂಗೆಡುತಲಿರಲು ।
ತಾರುಣ್ಯದಾತೀಕ್ಷ್ಣ ಮದನಾಸ್ತ್ರದಿಂದವಳ ।
ದೇಹವೆಲ್ಲವು ತಾಪದಿಂ ಸುಡುತಲಿರಲು ॥ ೨೩ ॥

ಕಣ್ವನಾ ಪ್ರಿಯಪುತ್ರಿ ಕಣ್ಮಣಿ ಸುಕೋಮಲೆಯು ।
ಸೊರಗುತ್ತಲಿರ್ದಳತಿ ವಿರಹಾಗ್ನಿಯಿಂದ ।
ಪಿತನಿಲ್ಲದಿದ್ದಾಗ ಹೀಗಾಯಿತೇಎಂದು ।
ಮರುಗುತಿದ್ದಳು ಮುಗ್ಧೆ ಭೀತಮನದಿಂದ ॥ ೨೪ ॥

ತಾಪದಿಂ ಬಳಲುತಿಹ ಲಲಿತಾಂಗಿಯನು ನೋಡಿ ।
ಸಖಿಯರೆಲ್ಲರು ಭಯದಿ ಬಲುಚಿಂತಿಸುತಲಿ ।
ಆಶ್ರಮದ ಪಿತಕಣ್ವನಿಲ್ಲದಾ ವೇಳೆಯಲಿ ।
ಏಕಾಯ್ತು ಹೀಗೆನುತ ಖತಿಗೊಂಡರವರು ॥ ೨೫ ॥

ಏನಾಗುತಿದೆ ನಿನಗೆ ದೇವಿ ಅದನುಸುರೆನುತ ।
ಉಪಚಾರದಿಂ ನಾರಿಯರು ಸುಖಿಸುತಿರಲು ।
ವರಮನೋಹರಿ ಮುಗುದೆ ಬಾಯ್ಬಿಡದೆ ಕಿವಿಯಲ್ಲಿ ।
ಮನದಿಚ್ಛೆಯನ್ನರುಹಿ "ಹಾ !" ಎಂದಳವಳು ॥ ೨೬ ॥

ಗ್ರೀಷ್ಮದಾ ಬೇಗೆಯೊಡಗೂಡಿದಾ ದಾವಾಗ್ನಿ ।
ದಹಿಸುತಿಹ ಪರಿಯರಿತ ವರ ಸಖಿಯರವರು ।
ಪ್ರೇಮಪತ್ರವ ಬರೆದು ಪ್ರೇಮಿಗದ ಕಳುಹೆಂದು ।
ಹೇಳಿದರು ಕಾಮಿನಿಗೆ ಪ್ರೀತಿಯಿಂದವರು ॥ ೨೭ ॥

ಪ್ರೇಮಗೀತೆಯರಚಿಸಿ ಕಮಲಪತ್ರದಿ ಬರೆದು ।
ಕಳುಹಿದಳು ಕರೆಯೋಲೆ ದುಷ್ಯಂತಗೆಂದು ।
ಕಣ್ವನಾಶ್ರಮದಲ್ಲಿ ಇಲ್ಲದಿಹುದನು ನೆನೆದು ।
ಭಯಭರಿತಳಾದಳವಳರೆಚಣದೊಳೆಂದು ॥ ೨೮ ॥

ಕಾಮಶರಹತಿಯಿಂದ ಬಳಲಿದಾ ದುಷ್ಯಂತ ।
ಕಾಮಿನಿಯ ಧ್ಯಾನದಲೆ ಮುಳುಗೇಳುತಿರಲು ।
ಬಂದಿತಾಗಲೆ ಪ್ರೇಮರಸದೂಟದಾಹ್ವಾನ ।
ಹೊರಟನಾ ಪ್ರಿಯತಮೆಯ ಮನತಣಿಸಿ ಬರಲು ॥ ೨೯ ॥

ರತಿಯ ಸರ್ವಸ್ವದಾ ಅಧರರಸ ಪಾನವದ ।
ಕಾಗಿ ನೃಪ ದುಷ್ಯಂತ ಮೋಹಿನಿಯ ಸೆಳೆದ ।
ಪ್ರೇಮದಿಂ ಬಿಗಿದಪ್ಪಿ ಚಂದ್ರವದನವ ಪಿಡಿದು ।
ಪ್ರೇಮರಸ ಸವಿಯಲ್ಕೆ ಸಂತೋಷಪಡೆದ ॥ ೩೦ ॥

ಈಗಬೇಡೆಂಬಂತೆ ಮದನಾಂಗಿ ತಡೆಯುತಿರೆ ।
ಪ್ರೇಮದಾಲಿಂಗನವು ಬಿಗಿಯಾದುದಾಗ ।
ಯಾರೊ ಕರೆದಾ ಧ್ವನಿಯು ಕೇಳುತಿರಲಾಕ್ಷಣದಿ ।
ರಸಭಂಗವಾದುದಾ ಪ್ರೇಮಿಗಳಿಗಾಗ ॥ ೩೧ ॥

ಸೌಂದರ್ಯ-ಸೌಗಂಧ

ಬಾಲ್ಯವದು ಕಳೆಯುತಲಿ ಯೌವನವದೇರುತಿದೆ ।
ಹಾಲ್‌ಗೆನ್ನೆ ಶೋಭಿಪುದು ಹೊಂದಗಡಿನಂತೆ ।
ದುಂಡನೆಯು ದುಂಡುಮೊಗ ಹೂವಿನಂತರಳಿಹುದು ।
ಬೆಂದ ಹೃದಯವು ತಣಿದು ಮನವರಳುವಂತೆ ॥ ೧ ॥

ಮಾತಿನೊಳ್ ಮಾಧುರ್ಯ ಹಸಿಹಸಿದು ರುಚಿಪುದದು ।
ಕಾತರಿಪ ಕಣ್ಣೋಟ ಭ್ರಮೆಗೊಳಿಸುತಿಹುದು ।
ಚೆಲುವೊಲವು ಮಾಯೆಗಳ ಸಮ್ಮೋಹನಾಸ್ತ್ರವದು ।
ಸುಲಭದಿಂ ಮನವೊಲಿಸಿ ಸುಖಿಸುತ್ತಲಿಹುದು ॥ ೨ ॥

ಚಣ ಚಣದಿ ನವಭಾವ ದರ್ಶಿಸುತ ನರ್ತಿಪಳು ।
ಚಂಚಲಾಕ್ಷಿಯು ಚತುರೆ ಚಾತುರ್ಯದಿಂದ ।
ಕೋಮಲತೆಯಿಂದೊಪ್ಪಿ ಕಂಗೊಳಿಸುತಿಹರೂಪ ।
ಮೆರೆಯುತಿದೆ ರಸದೂಟೆಗಳ ಸೊಬಗಿನಿಂದ ॥ ೩ ॥

ಯೌವನದ ಮದದಿಂದ ಪುಷ್ಟಳಾಗಿಹ ಪ್ರಮದೆ ।
ತೋರುವಳು ಕುಚಭಾರದಿಂ ಬಳಲಿದಂತೆ ।
ಜಾರುತಿಹ ಎದೆಸೆರಗನಡಿಗಡಿಗೆ ಸರಿಸುತಿಹ ।
ನೀರಜಾಕ್ಷಿಯು ನಡಿಗೆ ಮರಿಯಂಚೆಯಂತೆ ॥ ೪ ॥

ಮುಡಿಯಲ್ಲಿ ಪವಡಿಸಿದೆ ಗಮಗಮಿಪ ಸುಮರಾಶಿ ,
ಜಡೆಯೆರಡು ಆಡುತಿವೆ ಜತೆ ಹಾವಿನಂತೆ ।
ಕೆಂದುಟಿಯ ಮುಗುಳೊಂದು ಅರಳುತಿದೆ ಸುಮದಂತೆ ।
ಮಂದಾರದಾ ಮುಗುಳು ನಸುನಾಚುವಂತೆ ॥ ೫ ॥

ಸೌಂದರ್ಯ ಸೌಗಂಧ ಸಂಮಿಲನವಾಗಿರಲು ।
ದುಂಬಿಗಳು ದೂರದಿಂ ದಿಣಿಕುತ್ತಲಿಹವು ।
ಯುವಕರಿಗೆ ರಸದೂಟ ವೃದ್ಧರಿಗೆ ಚಾಪಲ್ಯ ।
ಸೌಂದರ್ಯರಹಿತೆಯರಿಗದು ನೋವು ದಿಟವು ॥ ೬ ॥

ಮುನ್ನುಗ್ಗಿ ಮುದದಿಂದ ಮಧುಮಾಸ ಬಂದಿರಲು ।
ಭೂದೇವಿ ರಂಜಿಪಳು ನವ ವಧುವಿನಂತೆ ।
ಪುಷ್ಪಗಳು ಸೊಂಪಾಗಿ ಪರಿಮಳವ ಸೂಸುತಿವೆ ।
ಭ್ರಮರಗಳು ಮೋಹಿಸಿವೆ ನವತರುಣರಂತೆ ॥ ೭ ॥

ಕವಿಗಳಿಗೆ ರಸವಿತ್ತು ರಸಿಕರಿಗೆ ಸವಿನೀಡಿ ।
ಸೌಂದರ್ಯ ಸುಗುಣಗಳು ಬೆಳಗುತ್ತಲಿರಲಿ ।
ಜಗದ ಜೀವನನೌಕೆ ಪ್ರೇಮವಾಹಿನಿಯೊಡನೆ ।
ಸತ್ಪಥದಿ ಚಲಿಸುತ್ತ ದಡಸೇರುತಿರಲಿ ॥ ೮ ॥

ಮನಮೋಹಿನಿ

ಉಗಿಯ ಬಂಡಿಯು ಸಾಗುತಿದ್ದಿತು ।
ಹೊಗೆಯ ಕಾರುತ ವೇಗದಿ ।
ಭುಗಿಲು ಭುಗ್ ಭುಗ್ ಕಡಕಡೆನ್ನುತ ।
ದಿಗಿಲುಗೊಳಿಸುವ ವೇಗದಿ ॥ ೧ ॥

ಎರಡನೆಯ ತರಗತಿಯಲಿಬ್ಬರು ।
ಹರಟೆ ಹೊಡೆಯುತಲಿದ್ದರು ।
ಮೂರನೇಯವಳೊಬ್ಬ ತರುಣಿಯು ।
ಬಳುಕು ತಳುಕುತಲಿದ್ದಳು ॥ ೨ ॥

ಯೌವನದಿ ಚೆಲುವಾಂತ ಪ್ರಮದೆಯ ।
ನವಳ ನೋಡುವ ಚಪಲದಿ ।
ಬೇಡವೆಂದರು ಓಡುತಿರೆ ಮನ ।
ರಸಿಕತೆಯ ನಿಜಭಾವದಿ ॥ ೩ ॥

ಚಂಚಲಾಕ್ಷಿಯ ಚಪಲಚಿತ್ರವ ।
ದೇಕೆ ಚಂಚಲವಿದ್ದಿತೊ? ।
ಮಿಂಚಿನಂದದೊಳವಳ ದೃಷ್ಟಿಯ ।
ದೇನ ನರಸುತಲಿದ್ದಿತೋ? ॥ ೪ ॥

ಎಂತು ಚಿತ್ರಿಸಲವಳ ಮೋಹಕ ।
ಮೋಹನಾಂಗದ ಚಿತ್ರವ ।
ಎಂತು ತೋರಿಸಲಿಂದು ನಿಮಗಾ ।
ಇಂದುವದನೆಯ ರೂಪವ ॥ ೫ ॥

ಪೂರ್ಣ ಚಂದ್ರನ ಕಾಂತಿಯೆಲ್ಲವ ।
ದವಳ ಮೊಗದಲಿ ಬೆಳಗಿತೋ? ।
ಪೂರ್ಣಶೀತಲ ಶಾಂತಿದಾಯಕ ।
ಸೌಮ್ಯತೆಯು ಕಳೆಗೊಂಡಿತೋ? ॥ ೬ ॥

ದುಂಡುಮೊಗದಾ ತುಂಬುಗೆನ್ನೆಗ ।
ಳಲ್ಲಿ ಕುಂಕುಮಕಾಂತಿಯೋ?
ಮುಗುಳುನಗೆಯಾ ಮೋಹಕತೆಯಲಿ ।
ಸುರೆಯ ಮಾದಕ ಶಕ್ತಿಯೇ? ॥ ೭ ॥

ಬಿಳಿಯ ದೇಹವ ಕಪ್ಪುವಸನವು ।
ಬಳಸಿ ಮಿರುಗುತಲಿದ್ದಿತು ।
ಭೇದವೆಣಿಸದೆ ದೇಹಕಾಂತಿಯ ।
ದರ್ಶಿಸುತ ಮೆರೆದಿದ್ದಿತು ॥ ೮ ॥

ಷೋಡಷಿಯ ಸೌಂದರ್ಯ ಯೌವನ ।
ತುಂಬು ದೇಹದ ನೋಟವು ।
ಉಬ್ಬಿದೆದೆಯಾ ಉಬ್ಬರದ ಪರಿ ।
ಕಣ್ಣಗೌತಣದೂಟವು ॥ ೯ ॥

ಬಿರಿವ ದಾಡಿಮದಂತೆ ಕುಚಗಳು ।
ರವಕೆಯಿಂ ಬಿಗಿದಿರುತಿರೆ ।
ಎದೆಯನುಬ್ಬಿಸುತಾಕಳಿಸುತಾ ।
ರಮಣಿ ಸಂತಸಗೊಳುತಿರೆ ॥ ೧೦ ॥

ಮುಡಿಯ ಮಲ್ಲಿಗೆ ಜಾಜಿ ಪುಷ್ಪಸು ।
ಗಂಧ ಸೌರಭ ಹರಡಿರೆ ।
ಜಡೆಯುಗೊಂಡೆಯು ತೊಡೆಯಮೇಲ್ತಾ ।
ಹೆಡೆಯ ತೆರದಲಿ ಸೊಗಸಿರೆ ॥ ೧೧ ॥

ಮಧ್ಯರಾತ್ರಿಯ ಸಮಯವಾಗಲು ।
ಬಂಡಿತಂಗಿದುದೊಂದೆಡೆ ।
ಇಬ್ಬರಿಳಿಯಲು ಒಬ್ಬಳುಳಿದಳು ।
ಬಂಡಿವೋಡಿತು ಮುಂಗಡೆ ॥ ೧೨ ॥

ತರುಣಿಯಾರಿವಳೆಂಬ ಪ್ರಶ್ನೆಯು ।
ಉದಿಸುತಾಗಲೆ ಮನದಲಿ ।
ಅವಳ ಪರಿಚಯ ತಿಳಿಯಬೇಕೆಂ ।
ದುತ್ಸುಕತೆಯಿರೆ ಮನದಲಿ ॥ ೧೩ ॥

ಕಿಟಕಿ ತೆರೆಯಲು ಕಷ್ಟ ಪಡುತಿರು ।
ವವಳ ಪರಿಯನು ನೋಡುತ ।
ತೆರೆದು ಕೊಡಲಾನವಳು ಮೋಹಕ ।
ವಾಗಿ ನಕ್ಕಳು ನೋಡುತ ॥ ೧೪ ॥

ಮಂದಹಾಸವ ಬೀರಿ ಪವಡಿಸ ।
ಲಾಕೆ ಸೆರಗನು ಸರಿಸುತ ।
ಹಣವ ಸರಿಪಡಿಸಿಡುತ ಕಿಸೆಯಲಿ ।
ಮಲಗಿಕೊಂಡೆನು ಓದುತ ॥ ೧೫ ॥

"ನಗ್ನಸತ್ಯ" ವನೋದುತೋದುತ ।
ಕಣ್ಣುಕತ್ತಲೆ ಕವಿಯಿತು ।
ಹಲವು ಆಲೋಚನೆಗಳೆಡೆಯಲಿ ।
ಕೊನೆಗೆ ನಿದ್ರೆಯು ಹಿಡಿಯಿತು ॥ ೧೬ ॥

ರೈಲು ಕೂಗಲು ತೀಕ್ಷ್ಣಸ್ವರದಲಿ ।
ಫಕ್ಕನೆಚ್ಚರವಾಯಿತು ।
ಕಣ್ಣು ಬಿಡುತಲಿ ನೋಡೆ ಬಂಡಿಯು ।
ನಿಲುಮನೆಯ ಸೇರಿದ್ದಿತು ॥ ೧೭ ॥

ಬೆಂಗಳೂರು ನಿಲ್ದಾಣವದು ಬಹು ।
ಜನನಿವಹ ಸಂಪೀಡಿತ ।
ಬೇಗನಿಳಿಯಲು ಸಿದ್ಧನಾದೆನು ।
ಕೂಲಿಯವರನು ಕರೆಯುತ ॥ ೧೮ ॥

ಹಣದ ಕಿಸೆಯನು ನೋಡಿದಾಕ್ಷಣ ।
ಜೀವಹಾರಿತು ಚಣದಲಿ ।
ತರುಣಿ ಅಲ್ಲಿರಲಿಲ್ಲ ನೋಡಲು
ಮರುಗಿ ಮುಳುಗಿದೆ ವ್ಯಥೆಯಲಿ ॥ ೧೯ ॥

ಮುದ್ದು ಮೊಗದಾ ಮೋಹನಾಂಗಿಯ ।
ಕಪಟ ಹೃದಯುವನರಿಯುದೆ ।
ಸುಖದಿ ನಿದ್ರಾಧೀನನಾಗುತ ।
ಮೋಸಹೋದೆನು ತಿಳಿಯುದೆ ॥ ೨೦ ॥

ಕಾಮದಹನಂ

ಘೋರತಪದಾ ದೀಕ್ಷೆ ಕೈಗೊಂಡ ಪರಮೇಶ ।
ನೇಕಚಿತ್ತದಿ ಕುಳಿತು ತಪಗೈಯ್ಯುತಿರಲು ।
ಶಪಥದಿಂ ಮನ್ಮಥನು ತಪವಕೆಡಿಸಲು ಹೊರಡು ।
ತಿರಲಾಗ ಸುರರೆಲ್ಲ ಸಂತಸದೊಳಿರಲು ॥ ೧ ॥

ಧೈರ್ಯದಿಂದಾ ಮದನ ಮೆಲ್ಲಮೆಲ್ಲನೆ ಬಂದ ।
ದೃಢಮನದಿ ಧೂರ್ಜಟಿಯ ನೋಡುತ್ತನಿಂದ ।
ಹಡಗೊಳಿಸಿ ಪೂಶರವ ಹೂಡಬೇಕೆಂದೆನುತ ।
ಮಾರ್ಜಾಲದಂತೆ ತಾ ನೋಡುತ್ತಲಿರ್ದ ॥ ೨ ॥

ಎಡಗೈಯ ಕೋದಂಡ ತುಂಬಿಗಳ ಝೇಂಕಾರ ।
ಪ್ರತಿಧ್ವನಿಸಿ ಪಂಚಮದ ಶೃತಿಗೈಯ್ಯುತಿರಲು ।
ಪುಷ್ಪಸೌರಭವೆಲ್ಲ ಕೂಡಿ ಪಸರಿಸುವಂತೆ ।
ಪುಷ್ಪಬಾಣದ ಮಹಿಮೆ ಗೋಚರಿಸುತಿರಲು ॥ ೩ ॥

ತಪದುರಿಯಿನಾವನದ ಸೌಮ್ಯ ವಾತಾವರಣ ।
ಭೀಕರತೆಯಿಂದೊಪ್ಪಿ ಬಹುತೀಕ್ಷ್ಣವೆನಿಸೆ ।
ತರುಲತಾಗುಚ್ಛಗಳು ಬಾಡಿಕಂಗೆಟ್ಟಿರಲು ।
ಮದನನಾಗಮನದಿಂದಾಗ ಚೇತರಿಸೆ ॥ ೪ ॥

ನವಹರ್ಷದಿಂ ಕಾಮಹೂಡಿದಾ ಬಾಣದಿಂ ।
ಮಧುಮಾಸದಾ ಶೋಭೆ ಪಸರಿಸಿದುದಲ್ಲಿ ॥
ತಂಪಾದ ತಂಗಾಳಿ ಬೀಸುತ್ತಲಿರುತಿರಲು ।
ಪಕ್ಷಿಗಳ ಮಧುಗಾನ ಕೇಳುತಿರಲಲ್ಲಿ ॥ ೫ ॥

ಫಲಭಾರದಿಂ ವೃಕ್ಷ ತತಿಗಳೆಲ್ಲವು ಬಾಗಿ ।
ಪರಿಮಳದ ಪುಷ್ಪಗಳು ಸೊಂಪಾಗಿ ಅರಳಿ ।
ನರ್ತನವ ಮಾಡುತ್ತ ನವಿಲುಗಳು ಬರುತಿರಲು ।
ಮಧುಪಾನದಿಂ ತೃಪ್ತಭ್ರಮರಗಳು ಮರಳಿ ॥ ೬ ॥

ಪರಿಪರಿಯ ಸೌಗಂಧ ತೋಷಮಂ ನೀಡುತಿರೆ ।
ಪರಿಸರದೊಳಾನಂದ ನಲಿನಲಿಯುತಿರಲು ।
ಮನ್ಮಥನ ಮಾಯೆಯಿಂ ಮನಮೋಹಿಪಾ ಛಾಯೆ ।
ಸುತ್ತಲಾವರಿಸುತ್ತ ತುಂಬುತ್ತಲಿರಲು ॥ ೭ ॥

ಸಮಯವನ್ನೀಕ್ಷಿಸುತಲಿರುತಿರ್ದ ರತಿಪತಿಯು ।
ಶಿವನೆಡೆಗೆ ಮುನ್ನಡೆವ ಪಾರ್ವತಿಯ ಕಂಡು ।
ಹಿಗ್ಗುತಲಿ ಬಾಣವನ್ನ“ದೊಬಿಟ್ಟೆ”ನೆನುತಿರಲು ।
ಜಾರುತದು ಹಸ್ತದಿಂದೇನಾಯ್ತೊ ಮುಂದು ॥ ೮ ॥

ಪುಷ್ಪಗಳನರ್ಪಿಸಲು ಶಿರಬಾಗಿ ನಿಂದಿರ್ದ ।
ಉಮೆಗೇಕೊ ಲಜ್ಜೆಯಾವರಿಸುತ್ತಲಿರಲು ।
ಶಿರವ ಕಂಪಿಸಿ ದೃಷ್ಟಿ ಹೊರಳಿಸಿದ ತಾಪಸಿಯ ।
ಉಗ್ರತೆಯ ವರ್ಣಿಪಾ ಕವಿಯಾವನಿಹನು ? ॥ ೯ ॥

ಹುಂಕರಿಸಿ ಕಣ್ಗಳಿಂ ಕಿಡಿಗಳುದುರಿಪ ಪ್ರಳಯ ।
ಕಾಲಭೈರವನಂತೆ ರುದ್ರನವ ಜವದಿ ।
ಮೋಸಗಾರನ ಕೃತ್ಯವನು ನೋಡಿ ದಳ್ಳುರಿಯ ।
ಉರಿಗಣ್ಣ ತೆರೆದನ್ನೈ ಘುಡುಘುಡುಸಿ ಭರದಿ ॥ ೧೦ ॥

ಪ್ರಳಯರುದ್ರನ ರೋಷ ದಾವಾನಲಜ್ವಾಲೆ ।
ಗಿದಿರೇನು ಧರೆಯಲ್ಲಿ ಪರಮೇಶಬಲ್ಲ ।
ಮನ್ಮಥನ ನಿರ್ವಾಣ ಪ್ರಕೃತಿ ಚೆಲ್ವಿಕೆಯೆಲ್ಲ ।
ವಿಷಮರೂಪಾದುದದು ಅರೆಚಣದೊಳೆಲ್ಲ ॥ ೧೧ ॥

ಹರನ ರೌದ್ರವಕಂಡು ಕಣ್ಮುಚ್ಚಿ ಕಂಪಿಸುತ ।
ಕಂಗೆಟ್ಟ ಕಾಮುತಾಶಿವನೆದುರಿಗಿರಲು ।
ಉರಿಗಣ್ಣನಿಂ ಹರಿದ ಕಠಿಣ ಜ್ವಾಲಾಮುಖಿಗೆ ।
ಸಿಲುಕಿದಾ ಸುಂದರನು ದಹಿಸುತ್ತಲಿರಲು ॥ ೧೨ ॥

ಬಿರುಗಾಳಿಯಿಂ ಮುರಿದ ತರುವಿನಾಶ್ರಯ ರಹಿತ ।
ಲತೆಯಂತೆ ರತಿಯಾಗ ಧರೆಗುರುಳಿ ಬೀಳೆ ।
ವೈಧವ್ಯವನ್ನಿತ್ತು ಚಿಂತಾಗ್ನಿಯಲಿ ನೂಕಿ ।
ನಗುತಿರುವ ವಿಧಿಗಾಗಿ "ಹಾ" ಎನುತ ನರಳೆ ॥ ೧೩ ॥

ಲಯಕರ್ತರುದ್ರನಂ ಕೆಣಕಿ ಜೀವಿಸರಾರು ?
ಹೀಗಾಯ್ತೆ ? ರತಿಪತಿಯ ಗತಿಯೆಂದು ಸುರರು ।
ಮುಂದೇನುಯೆಂದೆನುತ ಬಲುಭೀತಿ ತಾಳಿದರು ।
ಕಾಮನಾದಹನಮಂ ನೋಡುತ್ತಲವರು ॥ ೧೪ ॥

ಕಾಮನನು ಸುಟ್ಟಿಸೆದು ತೆರಳಿದೀಶನಕಂಡು ।
ಭೀತಿ ಬೆರತಾದುಃಖದಿಂ ಬೆಂದಳುಮೆಯು ।
"ಏತಕೆನಗೀರೂಪ-ವೇತಕೀ ಸೌಂದರ್ಯ ।
ವೆಂದೆನುತ ಮುನ್ನಡೆದಳಾ ಚಂದ್ರಮುಖಿಯು ॥ ೧೫ ॥

ತಾಪಸಿಗಳೆಲ್ಲರಿಗೆ ವರವಕೊಡುತಿಹಯೆನಗೆ ।
ಏತಕಿನ್ನೀ ತಪವದೆಂದೆನುತ ಹರನು ।
ಪೊರಡುತ್ತಲಲ್ಲಿಂದ ಪಾರ್ವತಿಯ ಧ್ಯಾನದಿಂ ।
ದರಸುತ್ತಲಾಕೆಯನು ಮುಂದಾದನವನು ॥ ೧೬ ॥

ಸೂರ್ಯ ನಮಸ್ಕಾರಮ್

॥ ಕಂದಂಗಳ್ ॥

ಹರಿಯಿಂದಂ ಸುಜ್ಞಾನಂ ।
ಹರಿಯಿಂದಂ ಪರಿಹರಿಪುದು ಜನರಜ್ಞಾನಂ ।
ಹರಿಯಾ ವರ ಗುಣಗಾನಂ ।
ನರರಿಂಗದು ತಾ ಮಹಾಸುಚೇತನದಾನಂ ೧ ॥

ಹರಿನಾಮಂ ಮಧುರಂ ಹರಿ
ಗುರುವಾಗಿರ್ಪಂ ಧರೆಗುರೆ ಕಾಂತಿಯನೀವಂ ।
ಹರಿಕೀರ್ತನೆಯದು ಭಾಗ್ಯಂ ।
ಹರಿ, ಹರಿ, ಎನ್ನುತ ಪೊಡಮಡುತಿರಲಾರೋಗ್ಯಂ ॥ ೨ ॥

ಹರಿಯಿಲ್ಲದ ಕಾನನಮುಂ ।
ಹರಿಯಿಲ್ಲದ ದೇವಲೋಕದಮರಾವತಿಯುಂ ।
ಹರಿಸಂಕೀರ್ತನೆಯಿಲ್ಲದ ।
ನರನಾರಿಯರೇಂ ಸುಶಕ್ತಿ ಪಡೆವರೆ ಜಗದೊಳ್ ೩ ॥

ಹರಿಯೆಂಬೆರಡಕ್ಕರಕಂ ।
ಸರಿಯಿಲ್ಲಂ ಸಿರಿಯಪಾರ ಭಾರಂ ತೂಗಲ್ ।
ಹರಿನಾಮಂ ಲಘುಘನವನ ।
ವರತಂ ನಿಲ್ವುದು ಪರಿಕಿಸಲತಿ ಮೇಲ್ಸಿರಿಯಿಂ ॥ ೪ ॥

ಹರಿಯಾರಾಧನೆ ನಿತ್ಯಂ ।
ಹಿರಿದಾಗಿರ್ಪುದು ಪ್ರಭಾತಸಮಯಕ್ಕೆಂದುಂ ।
ಬರೆವಂ ಗುರುಕೃಪೆಯಿಂದಂ ।
ಗಿರಿಜಾಪ್ರಿಯ ನೀಲಕಂಠಶರ್ಮಂ ನಲವಿಂ ॥ ೫ ॥

ಶ್ರೀಸ್ವಾಗತಗೀತೆ

ಶೃಂಗಪುರಾಧಿಪಯತಿವರಗೆ ।
ತುಂಗಾತೀರದ ಪುಂಗವಗೆ ।
ಶಾರದೆಯಾ ವರ ವಿದ್ಯಾಪೀಠದಿ ।
ರಂಜಿಸುತಿಹ ಜಗದ್ವಂದಿತಗೆ ॥ ಸ್ವಾಗತಂ-ಸುಸ್ವಾಗತಂ ॥ ೧ ॥

ಜಗದ್ಗುರು ಗುಣಸಾಗರಗೆ ।
ಮಹಾತಪೋನಿಧಿ ಭಾಸ್ಕರಗೆ ।
ಅದ್ವೈತಮತಸ್ಥಾಪಕ ಶ್ರೀಗುರು ।
ಪವಿತ್ರಪೀಠಾಲಂಕೃತಗೆ ॥ ಸ್ವಾಗತಂ-ಸುಸ್ವಾಗತಂ ॥ ೨ ॥

ಸಕಲಕಲಾಪ್ರಿಯ ಕೋವಿದಗೆ ।
ನ್ಯಾಯತರ್ಕ ಶಿರೋಮಣಿಗೆ ।
ವೇದರತ್ನ ಶಾಸ್ತ್ರಾದಿ ವಿಶಾರದ ।
ಮೀಮಾಂಸಾದಿ ವಿಭೂಷಣಗೆ ॥ ಸ್ವಾಗತಂ-ಸುಸ್ವಾಗತಂ ॥ ೩ ॥

ಅಜ್ಞಾನದ ಮುಸುಕನು ಹರಿಸಿ ।
ಸುಜ್ಞಾನದ ಸುಧೆಯುಣಿಸುವಗೆ ।
ಈಶ್ವರಾಂಶ ಸಂಭೂತ ವಿಭೂತಿಗೆ ।
ಅಭಿನವ ವಿದ್ಯಾತೀರ್ಥರಿಗೆ ॥ ಸ್ವಾಗತಂ-ಸುಸ್ವಾಗತಂ ॥ ೪ ॥

ದಕ್ಷಿಣಕನ್ನಡಕಾಗಮಿಸಿ ।
ಪಾವನಗೊಳಿಸಿದ ಪೂಜ್ಯನಿಗೆ ।
ಅದ್ಭುತ ವಕ್ತೃತ್ವದಿ ಸದ್ಬೋಧೆಯ ।
ನೀಡುತ ಹರಸುವ ಮಹಿಮನಿಗೆ ॥ ಸ್ವಾಗತಂ-ಸುಸ್ವಾಗತಂ ॥ ೫ ॥

ನಾಡಿನವರ ವಿದ್ವನ್ಮಣಿಗೆ ।
ಲೋಕಪೂಜ್ಯ ಗುರುತಾಪಸಿಗೆ ।

ಸರಸತಿಯಾ ವರದಿಂದಲಿ ಮೆರೆಯುತ ।
ವಿದ್ಯಾನಿಧಿಯೆಂದೆನಿಸಿಹಗೆ । ಸ್ವಾಗತಂ-ಸುಸ್ವಾಗತಂ ॥ ೬ ॥

ಸಂಸ್ಕೃತ ಕವಿಕುಲತಿಲಕ ಶ್ರೀ ।
ಶಂಕರಪೀಠ ವಿರಾಜಿತೆಗೆ ।
ಉನ್ನತ ಪಥವನು ತೋರೆಂದೆನುತಲಿ ।
ಸ್ವಾಗತಿಸುವೆನತಿ ಸಂಭ್ರಮದಿ । ಸ್ವಾಗತಂ ಸುಸ್ವಾಗತಂ ॥ ೭ ॥

(ಶ್ರೀ ಅಭಿನವ ವಿದ್ಯಾತೀರ್ಥರ ಸನ್ನಿಧಾನದಲ್ಲಿ ದಿನಾಂಕ-26 – 3—1959ರಂದು ಹಾಡಿ ಅರ್ಪಿಸಿದ ಸ್ವಾಗತಗೀತೆ)

ತ್ರಿಕ್ಷೇತ್ರ—ಗೋವಟೇಶ

ಧೀರ ಶಿರೋಮಣಿ ಸಚ್ಚಾರಿತ್ರನು ।
ಆಶ್ರಿತರನು ಮುದಗೊಳಿಸುವನು ।
ಇಷ್ಟಾರ್ಥಂಗಳ ಭಕ್ತರಿಗೀಯುತ ।
ಈಶ್ವರಾಂಶನೆಂದೆನಿಸಿಹನು ॥ ೧ ॥

ಉನ್ನತ ಶಿಖರದಿ ಮೆರೆಯುತಲಿಹನು ।
ಊರಿನ ರಕ್ಷಕನಂತಿಹನು ।
ಋಷಿಗಳ ತೆರಕುಳ್ಳಿರದೆಯೆನಿಂದಿಹ ।
ಉಗ್ರತಪೋನಿಧಿಯಂತಿಹನು ॥ ೨ ॥

ಪ್ರೇಕ್ಷಕರನು ತಾನಚ್ಚರಿಗೊಳಿಸುತ ।
ದೃಢಮನದಾ ಪರಿದರ್ಶಿಸನು ।
ಐಹಿಕ ಸುಖವದು ನಶ್ವರವೆನ್ನುತ ।
ತ್ಯಜಿಸಿದ ಪುರುಷಾಗ್ರೇಸರನು ॥ ೩ ॥

ಓಡುವ ಮನವನು ತನ್ನೆಡೆಗೆಳೆಯುತ ।
ಭಾವತರಂಗಗಳರಳಿಸುತ ।
ಶುದ್ಧದಿಗಂಬರ ರೂಪದಿ ತೋರುವ ।
ಜನಮತ ಪೂಜ್ಯನು ಗೋಮಟನು ॥ ೪ ॥

ಕನ್ನಡನಾಡಿನ "ಬೆಳಗೊಳ" ಕಾರ್ಕಳ
"ವೇಣೂರಿ" ಮೂರೆಡೆಗಳಲಿ ।
ಕರ್ಣಾಟಕ ಗತವೈಭವಶಕ್ತಿಯ ।
ಕೀರ್ತಿಯ ಸಾರುತ ರಂಜಿಪನು ॥ ೫ ॥

ಶ್ರೀ ನೀಲಕಂಠೇಶ್ವರ ಪಂಚಕಂ

॥ ಶಾರ್ದೂಲ ವಿಕ್ರೀಡಿತಂ ॥

ಶ್ರೀಮತ್ ಸುಂದರ ಚಂದ್ರಚೂಡವೃಷಭಾರೂಢೇಶ, ಗೌರೀಧವಾ,
ಕಾಮಾರೀಶ ಕುಲೇಂದ್ರಶೈಲ ನಿಲಯಾ, ಗೌರಾಂಗಭಕ್ತಪ್ರಿಯಾ,
ಸೋಮಾದಿತ್ಯ ಸುವಹ್ನಿತೇಜಕಿರಣಾ, ಜಾಜ್ವಲ್ಯ ತೇಜೋಮಯಾ,
ಸ್ವಾಮಿಶಂಕರನೆಮ್ಮ ನಿತ್ಯಸಲಹೈ ಶ್ರೀನೀಲಕಂಠೇಶ್ವರಾ ॥ ೧ ॥

॥ ಶಾ–ವಿ– ॥

ಬರೆದೆಂಕಾವ್ಯ ಸುಗೀತಮಂತವ ಕೃಪಾಪೂರ್ಣಪ್ರಸಾದಂಗಳಿಂ
ಗುರುವೇ ನಿನ್ನಯಮೋಘಪ್ರೇರಣೆ ಮಹಾಚೋದ್ಯಂ
ವಿಮರ್ಶಾಪರ
ಪಿರಿದಾಗೋದಿದೊಡೇನು ತಾಂನಿಶಿದಿನಂ ಸರ್ವಪ್ರಯತ್ನಂಗಳಿಂ
ಬರೆವೇನೆಂದೊಡೆ ಬರ್ಕುಮೇ ಛಲದೊಳುಂ
ಶ್ರೀನೀಲಕಂಠೇಶ್ವರಾ ॥ ೨

ಮಳೆಯಿಂದಂ ಕೆರೆತುಂಬಿ ಬರ್ಪ ತೆರದೊಳ್ ಪೂರ್ವಾತ್ಮ ಸಂಸ್ಕಾರದಿಂ
ಪಲವುಂ ವಿದ್ಯೆಕವಿತ್ವ ಶಕ್ತಿಯದುವುಂತಾನಾಗಿ ಸೇರ್ವಂತೆ ಸಂ-
ಕಲಿತಂಪುಣ್ಯ ವಿಶೇಷಮಾದ ನಿಧಿಯಿಂ ಸಂಪತ್ತು ತಾ ತುಂಬದೇ
ನೆಲೆ ಚಿಂತಾತುರನಾಗಲೇಕೆ ಮನವೇ ಶ್ರೀ ನೀಲಕಂಠೇಶ್ವರಾ ॥ ೩ ॥

ಜನನಂ ಮೂಲವು ಮೃತ್ಯುವಿಂಗೆ ಸುಖಮುಂದುಃಖಕ್ಕೆ ಮೂಲಂಸುಭೋ
ಜನಮುಂದಾಹಕೆ ಕಾರಣಂ ಜಗದೊಳಂ ನಿಷ್ಕಾಂಕ್ಷೆ ಸೌಖ್ಯಪ್ರದಂ
ಧನದಾಮೋಹ ಮಹಾಭಿಲಾಷೆಯದುತಾಂ ನಿತ್ಯಂಕುಚಿಂತಾಪ್ರದಂ
ಮನವೇ ಕೇಳತಿಯಾಸೆ ಮೃತ್ಯುತಿಳಿಯೈ ಶ್ರೀನೀಲಕಂಠೇಶ್ವರಾ ॥ ೪ ॥

॥ ಶಾ-ವಿ- ॥

ವಿದ್ಯಾನಾಮ ವಿವೇಕ ಸಾರಭರಿತಂ ಸುಜ್ಞಾನ ಜ್ಯೋತಿರ್ಮಯಂ
ವಿದ್ಯಾರೂಪಧನಂ ಸುಸಂಪದಕರಂ ವಿದ್ಯಾಯಶಸ್ಸಾಧನಂ
ವಿದ್ಯಾಭೂಷಣ ವಿಶ್ವವಂದ್ಯ ನಿಧಿತಾಂ, ವಿದ್ಯಾ ಮಹಾಸಾಗರಂ
ವಿದ್ಯಾಧೀನ ಸಮಸ್ತಸೌಖ್ಯ ವಿಜಯಂ ಶ್ರೀನೀಲಕಂಠೇಶ್ವರಾ ॥ ೫ ।



ಈ ಲೇಖಕರ ಪ್ರಕಟವಾದ ಇತರ ಕೃತಿಗಳು

- ಪಂಚಭಕ್ಷ್ಯ—(ಕಥಾಸಂಕಲನ)
- ಕಾವ್ಯತರಂಗ—(ಖಂಡಕಾವ್ಯ)
- ವಸಂತ ವಿಹಾರ –(ಅಭಿನಯ ಬಾಲಗೀತಾವಳಿ)
- ಧರ್ಮಾಮೃತದರ್ಶನ– (ಪರೀಕ್ಷೋಪಯೋಗಿ ಸಂಗ್ರಹ)
- ಡಾ॥ ಆರೋಗ್ಯಂ—(ಅನುವಾದಿತ)
- ಸ್ವಾತಂತ್ರ್ಯ—(ಏಕಾಂಕ ನಾಟಕ)

ಮತ್ತು

"ಭಾರತದ ವೀರಾಂಗನೆಯರು"

ಎಂಬ ಐತಿಹಾಸಿಕ ಕೃತಿಯು

ಸದ್ಯವೇ ಪ್ರಕಟವಾಗಲಿದೆ.